# ಬೋಧಕರ ವಿವರ

೧. **ಹೆಸರು** : ಡಾ.ಎಸ್.ಆರ್.ಚನ್ನವೀರಪ್ಪ

೨. **ಜನ್ಮ ದಿನಾಂಕ** : ೦೧.೦೪.೧೯೭೧

೩. **ವಿದ್ಯಾರ್ಹತೆ** : ಎಂ.ಎ., ಪಿಎಚ್.ಡಿ

೪. **ವಿಳಾಸ** : ಡಾ.ಎಸ್.ಆರ್.ಚನ್ನವೀರಪ್ಪ,
ಪ್ರಾಧ್ಯಾಪಕರು,
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬.

೫. **ಸ್ಥಿರ ದೂರವಾಣಿ** : –

೬. **ಮೊಬೈಲ್ ದೂ.ವಾ.** : ೯೪೮೦೭೨೮೪೮೯

೭. **ಫ್ಯಾಕ್ಸ್** : –

**8. ಈಮೇಲ್** : **srchannaveerappa@gmail.com**

೯. **ಕಾರ್ಯನಿರ್ವಹಿಸುತ್ತಿರುವ ವಿಭಾಗ** : ಹಸ್ತಪ್ರತಿಶಾಸ್ತ್ರ

೧೦. **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ** : ಸಹ ಪ್ರಾಧ್ಯಾಪಕರು

೧೧. **ವಿಷಯ ತಜ್ಞತೆ**
೧. ಹಸ್ತಪ್ರತಿಶಾಸ್ತ್ರ
೨. ಗ್ರಂಥಸಂಪಾದನೆ
೩. ಮಧ್ಯಕಾಲೀನ ಕನ್ನಡ ಸಾಹಿತ್ಯ

೧೨. **ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು :**
೧. ಹಸ್ತಪ್ರತಿಶಾಸ್ತ್ರ
೨. ಗ್ರಂಥಸಂಪಾದನೆ
೩. ಜನಪದ ಸಾಹಿತ್ಯ
೪. ಪ್ರಾಚೀನ ಕನ್ನಡ ಸಾಹಿತ್ಯ
೫. ಮಧ್ಯಕಾಲೀನ ಕನ್ನಡ ಸಾಹಿತ್ಯ

೧೩. **ಯೋಜನೆಗಳ ವಿವರ**
೧. **ಪ್ರಗತಿಯಲ್ಲಿರುವ ಯೋಜನೆಗಳು**
**ಕನ್ನಡ ಹಸ್ತಪ್ರತಿಗಳು : ಧಾರ್ಮಿಕ ಸಂಕಥನ**

ಆಧುನಿಕಪೂರ್ವ ಕನ್ನಡ ಸಾಹಿತ್ಯದ ಉಗಮ ಹಾಗೂ ವಿಕಾಸ ಕ್ರಮಗಳಲ್ಲಿ ಧರ್ಮ, ಮತಧರ್ಮ ಹಾಗೂ ಮನೋಧರ್ಮಗಳು ತುಂಬ ಶ್ರದ್ಧಾಪೂರ್ವಕವಾಗಿ, ಅಷ್ಟೇ ಪ್ರಜ್ಞಾಪೂರ್ವಕವಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಹಳಗನ್ನಡ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯದ ಹಲವು ಕವಿ ಹಾಗೂ ಅವರ ಕೃತಿಗಳನ್ನು ಒಮ್ಮೆ ಕಣ್ಮುಂದೆ ಸ್ಮರಿಸಿಕೊಂಡಾಗ, ಈ ಮಾತು ಮತ್ತಷ್ಟು ಸ್ಫುಟಗೊಳ್ಳುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಈಗಾಗಲೇ ನಮ್ಮ ಕಣ್ಮುಂದಿರುವ ಮೂರು ಸಾಹಿತ್ಯಿಕ ಮಾದರಿಗಳನ್ನು ಇಲ್ಲಿ ನೆನೆಯಬಹುದು. ಅವುಗಳೆಂದರೆ : ೧. ಜೈನ ಸಾಹಿತ್ಯ, ೨. ವೀರಶೈವ ಸಾಹಿತ್ಯ, ೩. ವೈದಿಕ ಸಾಹಿತ್ಯ, ಈ ಆಧುನಿಕಪೂರ್ವ ಕೃತಿಗಳ ರಚನೆಯ ಪ್ರಕ್ರಿಯೆಯಲ್ಲಿ ಹಲವು ಕಾರ್ಯಕಾರಣ ಸಂಬಂಧಗಳು, ಸಮುದಾಯಗಳು, ಪ್ರಭುತ್ವದ ಹಿತಾಸಕ್ತಿಗಳು ಇವೆಲ್ಲವುಗಳಲ್ಲದೆ, ಜ್ಞಾನ, ಪ್ರತಿಭೆ, ಪಾಂಡಿತ್ಯ ಹಾಗೂ ಪ್ರತಿಷ್ಠೆಯ ಜಿಜ್ಞಾಸೆಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ. ಈ ಎಲ್ಲ ಒತ್ತಾಸೆಗಳ ಫಲವಾಗಿ ಕವಿಯ ಕೃತಿಯೊಂದು ಅರಳಿರುತ್ತದೆ. ಇಂತಹ ಕವಿ–ಕಾವ್ಯ–ಕೃತಿರಚನೆಯ ಪ್ರಸರಣ ಹಾಗೂ ಪೋಷಣೆಯ ಪ್ರಕ್ರಿಯೆಯಲ್ಲಿ ಲಿಪಿಕಾರ ಹಾಗೂ ಪೋಷಕವರ್ಗಗಳು ಪ್ರಧಾನ ಪಾತ್ರ ನಿರ್ವಹಿಸಿವೆ.

ಇಂತಹ ಲಿಪೀಕರಣ ಪರಂಪರೆ ಹಾಗೂ ಲಿಪಿಕಾರರನ್ನು ಮುಖ್ಯವಾಗಿಸಿಕೊಂಡು ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ ಸಂಕಥನವನ್ನು ಕಟ್ಟಿಕೊಡುವುದು ಈ ಅಧ್ಯಯನದ ಆಶಯವಾಗಿದೆ. ಧರ್ಮ–ಮತಧರ್ಮ, ತತ್ವ–ಸಿದ್ಧಾಂತ ಹಾಗೂ ಶಾಸ್ತ್ರ

ಜಿಜ್ಞಾಸೆಗಳು ಈ ತ್ರಿವರ್ಗ (ಕವಿ, ಲಿಪಿಕಾರ, ಪೋಷಕ)ಗಳನ್ನು ಆವರಿಸಲ್ಪಟ್ಟಿವೆ. ಸ್ವಧರ್ಮಿಯರು ಕೃತಿಯ ಲಿಪೀಕರಣ, ಪೋಷಣೆ ಹಾಗೂ ಪ್ರಸರಣ ಕಾರ್ಯಗಳನ್ನು ತಮ್ಮ ಮತನಿಷ್ಠೆಯ ಪವಿತ್ರ ಕರ್ತವ್ಯವೆಂಬಂತೆ ಭಾವಿಸಿಕೊಂಡು, ಅದರಿಂದ ಪಾರಮಾರ್ಥಿಕ ಪುಣ್ಯ ಲಭಿಸುವುದೆಂಬ ಸಂಕಲ್ಪದಿಂದ ಈ ಕಾರ್ಯವನ್ನು ಆಗುಮಾಡುತ್ತಾ ಯಶಸ್ವಿಗೊಳಿಸುತ್ತಾ ಬಂದರು. ಒಟ್ಟಾರೆ ಆಧುನಿಕಪೂರ್ವ ಕನ್ನಡ ಸಾಹಿತ್ಯ ಈ ಮೂರು ಮುಖ್ಯ ಮಜಲುಗಳಲ್ಲಿ ಪ್ರವಹಿಸಿ ಬಂದ ಬಗ್ಗೆ ಈವರೆಗೆ ಸೂಕ್ಷ್ಮ ಅಧ್ಯಯನಗಳು ಅಷ್ಟಾಗಿ ನಡೆದಿರುವುದು ಕಂಡುಬರುವುದಿಲ್ಲ. ಅಂತೆಯೇ ಈ ಮೂರು ವರ್ಗಗಳನ್ನು ಪ್ರಧಾನವಾಗಿಟ್ಟುಕೊಂಡು ಪರಸ್ಪರ ಅವುಗಳ ನಡುವಿನ ಸಾತತ್ಯದಿಂದ ಉಂಟಾಗುವ ಫಲಶ್ರುತಿಯನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಕೈಗೊಳ್ಳಲಾಗಿದೆ.

**೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು.**

**೧. ನಾಗಲಿಂಗಸ್ವಾಮಿ ತತ್ವಪದಗಳು (೧೯೯೮–೯೯)**

ಕನ್ನಡದ ಶ್ರೇಷ್ಠ ತತ್ವಪದಕಾರರಾದ ಸೊಂಡೂರು ಪರಿಸರದವರಾದ ನಾಗಲಿಂಗಸ್ವಾಮಿಯವರು ಹಲವಾರು ತತ್ವಪದಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅವರ ತತ್ವಪದಗಳಿಗೆ ಚಾರಿತ್ರಿಕ ಮಹತ್ವವಿದೆ. ನಾಗಲಿಂಗಸ್ವಾಮಿಗಳು ಸಮುದಾಯದಲ್ಲಿ ಭೇದ ಭಾವ ಎಣಿಸದೆ ಜನಸಾಮಾನ್ಯರಲ್ಲಿ ಬೆರೆತು ಬದುಕಿನ ಕ್ರಿಯಾಶೀಲತೆಯ ಬಗ್ಗೆ ಜನತೆಗೆ ಬೋಧಿಸಿದರು. ಆ ಬೋಧನೆಯು ವಾಸ್ತವಿಕವಾಗಿತ್ತು, ಕೃತಕವಾಗಿರಲಿಲ್ಲ ಅವರ ತತ್ವಪದಗಳಲ್ಲಿ ಗುರು ಶಿಷ್ಯರ ಸಂಬಂಧ ಹಿಂದೂ ಮುಸ್ಲಿಂ ಸಾಮರಸ್ಯತೆ, ಮಹಿಳಾ ಸಮಾನತೆ ಇಂತಹ ವೈಚಾರಿಕ ನೆಲೆಯಲ್ಲಿ ಅವರ ರಚನೆಗಳು ನಿರೂಪಿತವಾಗಿವೆ.

**೨. ಸ್ವರವಚನ ತರಂಗ ಸಂಪುಟ–೧ (೧೯೯೯–೨೦೦೦)**

ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಸ್ವರವಚನಗಳು ಬಹುಮುಖ್ಯವಾಗಿವೆ. ವಚನಗಳಿಗಿಂತ ಇವು ರಾಗ ಸಂಯೋಜಿತವಾಗಿರುತ್ತವೆ. ಅಂದರೆ ಇಲ್ಲಿ ರಾಗ ತಾಳಗಳಿಗೆ ಮಹತ್ವದ ಸ್ಥಾನವಿರುತ್ತದೆ. ಸಾಮೂದಾಯಿಕ ಕಳಕಳಿಯುಳ್ಳ ಸಮಾಜಮುಖಿ ಚಿಂತನೆಯುಳ್ಳ ಪರಿಪೂರ್ಣ ವ್ಯಕ್ತಿತ್ವವನ್ನು ರೂಡಿಸಿಕೊಳ್ಳುವ ಇವು ಇಲ್ಲಿಯ ಆಶಯವಾಗಿವೆ. ಈ ಕಾರಣಗಳಿಂದ ಸ್ವರವಚನಗಳು ಇಂದಿಗೂ ಪ್ರಸ್ತುತವಾಗಿವೆ. ಇಲ್ಲಿ ಸಂಗ್ರಹಿಸಿದ ೧೫೫ ಸ್ವರವಚನಗಳು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ದೊರೆತಂಥವು. ಕರ್ನಾಟಕದ ವಿವಿಧ ಪ್ರದೇಶ ಹಾಗೂ ಸಮುದಾಯಗಳಿಂದ ಸಂಗ್ರಹಿಸಿದ ಈ ರಚನೆಗಳಲ್ಲಿ ಸಹಜವಾಗಿ ವಿಭಿನ್ನತೆಯಿದೆ. ಇದರಿಂದ ಸ್ಥಳೀಯ ಸಮುದಾಯದ ಸಾಂಸ್ಕೃತಿಕ ಬದುಕನ್ನು ಅದರ ವೈವಿಧ್ಯತೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

**೩. ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ (೨೦೦೧–೦೨)**

ದುರ್ಗಸಿಂಹನ ಪಂಚತಂತ್ರ ಸಾಮಾನ್ಯವಾಗಿ ಭಾರತದಲ್ಲಿ ಪ್ರಚಲಿತದಲ್ಲಿದೆ. ಆದರೆ ವಿಷ್ಣುಶರ್ಮನ ಪಂಚತಂತ್ರ ಕರ್ನಾಟಕದಲ್ಲಿ ದೊರೆತದ್ದು ವಿಶೇಷ. ಬಳ್ಳಾರಿ ಪರಿಸದಲ್ಲಿ ದೊರೆತ ಒಂದು ಹಸ್ತಪ್ರತಿಯನ್ನಾಧರಿಸಿ ಸಂಪಾದಿಸಲಾಗಿದೆ. ದುರ್ಗಸಿಂಹನ ಪಂಚತಂತ್ರದಂತೆ ಇದೂ ಕೂಡ ಹಲವಾರು ಜನಪದ ಕತೆಗಳನ್ನು ಒಳಗೊಂಡಿದೆ. ವಿಶೇಷವೆಂದರೆ ಪ್ರಾದೇಶಿಕ ಭಾಷೆಯನ್ನು ಅಳವಡಿಸಿಕೊಂಡದ್ದು ಈ ಆವೃತ್ತಿಯ ಹೊಸತನವೆಂದು ಹೇಳಬೇಕು. ಕನ್ನಡ ವಿಶ್ವವಿದ್ಯಾಲಯವು ಈ ಕೃತಿಯನ್ನು ೨೦೧೫ರಲ್ಲಿ ಮರು ಮುದ್ರಿಸಿದೆ.

**೪. ದಾಸರಾಯರ ಪದಗಳು (೨೦೦೪–೦೭)**

ಕನ್ನಡ ಅನುಭಾವ ಸಾಹಿತ್ಯದಲ್ಲಿ ವಚನ ಸಾಹಿತ್ಯವನ್ನು ಬಿಟ್ಟರೆ ಕುಣ್ಣುತುಂಬ ನಿಲ್ಲುವುದು ದಾಸ ಸಾಹಿತ್ಯ ಅಪಾರವಾದ ದಾಸ ಸಾಹಿತ್ಯ ರಾಶಿಯಲ್ಲಿ ಪ್ರಯೋಗವಾಗಿರುವ ವಿವಿಧ ಪ್ರಕಾರಗಳನ್ನು ಗೇಯ ಪ್ರಕಾರಗಳೆಂದು ಛಂದೋಬದ್ಧ ಹಾಡುಗಳೆಂದು ಎರಡು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಇವುಗಳಲ್ಲಿ ಮೊದಲನೇ ವರ್ಗದಲ್ಲಿ ಸುಳಾದಿ, ಉಗಾಭೋಗ, ಕೀರ್ತನೆಗಳು ಸೇರುತ್ತದೆ. ಎರಡನೇ ವರ್ಗದಲ್ಲಿ ಸುವ್ವಿಹಾಡು, ವೃತ್ತನಾಮ, ಉದಯರಾಗ ಇವು ಸೇರುತ್ತವೆ. ಪ್ರಸ್ತುತ ದಾಸರಾಯರ ಪದಗಳಲ್ಲಿ ಈ ಎಲ್ಲ ಗೇಯ ರೂಪಗಳು ಸೇರಿವೆ. ವಿಶೇಷವಾಗಿ ಈ ಆವೃತ್ತಿಯ ಮುಖ್ಯಾಂಶವೆಂದರೆ ಇವೆಲ್ಲವೂ ಅಪ್ರಕಟಿತ ರಚನೆಗಳಾಗಿವೆ.

**೫. ಬಸವಕಲ್ಪಧ್ರುವಂ (೨೦೧೨–೧೪)**

ಬಸವಣ್ಣನವರ ಚರಿತ್ರೆಯೇ ಈ ಕಾವ್ಯದ ಮೂಲ ಕಥಾವಸ್ತು. ಬಸವಣ್ಣನವರ ಜೊತೆಗಿದ್ದ ಸಿದ್ಧರಾಮ, ಮಡಿವಾಳಯ್ಯ, ಹರಳಯ್ಯ ಮುಂತಾದ ಶರಣರ ಬಗ್ಗೆಯೂ ಇಲ್ಲಿ ಕುತೂಹಲಕಾರಿ ಮಾಹಿತಿಗಳಿವೆ. ೧೭ನೇ ಶತಮಾನದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳುವ ಬಸವ ಎಂಬ ಕವಿಯಿಂದ ರಚಿಸಲ್ಪಟ್ಟ ಈ ವರ್ಣಕ ಕಾವ್ಯದಲ್ಲಿ ಬಸವಣ್ಣನವರನ್ನು ಇತರ ಶಿವಶರಣರೊಂದಿಗೆ ಸಮೀಕರಣ ಮಾಡುವುದರ ಮೂಲಕ ವೀರಶೈವ ಧರ್ಮದ ಅನನ್ಯತೆಯನ್ನು ಕಾಣಬಹುದು. ದಾವಣಗೆರೆ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ 'ಹೂವಿನಮಡು' ಎಂಬ ಗ್ರಾಮದಲ್ಲಿ ದೊರೆತ ಹಸ್ತಪ್ರತಿಯ ಆಧಾರದಿಂದ ಈ ಕೃತಿಯನ್ನು ಸಂಪಾದಿಸಲಾಗಿದೆ.

**೩. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು**

**೧. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂಪುಟ–೨ (೧೯೯೭–೨೦೦೨)**

ಹಸ್ತಪ್ರತಿಗಳು ನಾಡಿನ ಅಮೂಲ್ಯ ಸಾಂಸ್ಕೃತಿಕ ಆಸ್ತಿ, ಅವುಗಳ ನೆರವಿನಿಂದ ಒಂದು ನಾಡಿನ ಚರಿತ್ರೆಯನ್ನು ಪುನರ್‌ರಚಿಸಬಹುದು. ಹಸ್ತಪ್ರತಿಶಾಸ್ತ್ರ ವಿಭಾಗವು ಹಸ್ತಪ್ರತಿ ಸಂಗ್ರಹ, ಸರ್ವೇಕ್ಷಣೆ ಹಾಗೂ ವರ್ಣನಾತ್ಮಕ ಸೂಚೀಕರಣ ಈ ಕೆಲಸವನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು ಈ ಜಿಲ್ಲೆಗಳಲ್ಲಿ ಪ್ರತಿ ಹಳ್ಳಿ ಹಳ್ಳಿಗೂ ಸಂಪರ್ಕಿಸಿ ಹಸ್ತಪ್ರತಿಗಳನ್ನು ಶೇಖರಿಸಿ, ಒರೆಸಿ, ಶುದ್ಧಿಕರಿಸಿ ಸೂಚಿ ಸಿದ್ಧಪಡಿಸಿದೆ. ಪ್ರತಿ ಸಂಪುಟವು ೪೦೦ ಕಟ್ಟಗಳ ವಿವರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಹಲವು ಅಪ್ರಕಟಿತ ಕೃತಿಗಳೂ ಸೇರಿವೆ.

**೨. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ–೪ (೨೦೦೨–೦೬)**

ಮೇಲಿನ ಸೂಚಿ ಸಂಪುಟದ ಮುಂದುವರಿಕೆ ಎಂಬಂತೆ ಹಸ್ತಪ್ರತಿ ಸಂಗ್ರಹ, ಸರ್ವೇಕ್ಷಣೆ, ಸೂಚೀಕರಣ ವಿಭಾಗದ ಸಾಂಸ್ಥಿಕ ಯೋಜನೆಯಾಗಿದೆ. ಈ ಸಂಪುಟದಲ್ಲಿ ಬಳ್ಳಾರಿ, ಕೊಪ್ಪಳ, ದಾವಣಗೆರೆ ಜಿಲ್ಲೆಗಳ ಪ್ರತಿಹಳ್ಳಿಗೂ ಕ್ಷೇತ್ರಕಾರ್ಯ ಕೈಗೊಂಡು ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿಯೂ ಸಹಿತ ೪೦೦ ಕಟ್ಟುಗಳ ವಿವರಗಳಿವೆ. ಹಲವಾರು ಅಪ್ರಕಟಿತ ಹಸ್ತಪ್ರತಿಗಳಿರುವುದು ಗಮನಿಸಬೇಕಾದ ಸಂಗತಿ.

**೪. ಶೈಕ್ಷಣಿಕ ಉದ್ದೇಶಕ್ಕಾಗಿ : (ವಿಶ್ವವಿದ್ಯಾಲಯ ಹೊರತುಪಡಿಸಿ) ನಿರ್ವಹಿಸಿದ ಯೋಜನೆಗಳು –**

## ೧೪. ಪ್ರಕಟಣೆಗಳು

**೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು (ಪ್ರಸಾರಾಂಗ. ಕವಿವಿ.ಹಂಪಿ)**

೧. ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಸೂಚಿ ಸಂಪುಟ–೨ (ಪ್ರ.ವರ್ಷ–೨೦೦೨)
೨. ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂಪುಟ–೪ (ಪ್ರ.ವರ್ಷ–೨೦೦೬)
೩. ನಾಗಲಿಂಗಸ್ವಾಮಿ ತತ್ವಪದಗಳು. (ಪ್ರ.ವರ್ಷ–೨೦೦೦)
೪. ಸ್ವರವಚನ ತರಂಗ ಸಂಪುಟ–೧ (ಪ್ರ.ವರ್ಷ–೨೦೦೦)
೫. ವಿಷ್ಣುಶರ್ಮನ ಪಂಚತಂತ್ರ ಕಥೆಗಳ ಕನ್ನಡ ಸಾರ ಸಂಗ್ರಹ (ಪ್ರ.ವರ್ಷ–೨೦೦೨)
೬. ದಾಸರಾಯರ ಪದಗಳು (ಪ್ರ.ವರ್ಷ–೨೦೦೭)
೭. ಬಸವಕಲ್ಪಧುವಂ (ಪ್ರ.ವರ್ಷ–೨೦೧೫)
(ಈ ಮೇಲಿನ ಪುಸ್ತಕಗಳು ಒಳಗೊಂಡ ವಿವರಗಳನ್ನು ೧೩ನೇ ಅಂಶದಲ್ಲಿ ವಿವರಿಸಲಾಗಿದೆ)

೮. ಮುಕ್ತಿಯ ಪರಿಕಲ್ಪನೆ (೨೦೦೬)

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಜೈನ ಕವಿಗಳು ಆಗಮಿಕ ಮತ್ತು ಲೌಕಿಕ ಎಂಬ ಎರಡು ಮಾದರಿಗಳನ್ನು ನಿರ್ದಿಷ್ಟ ಪಡಿಸಿಕೊಂಡು ಸಾಹಿತ್ಯ ಪ್ರಕ್ರಿಯೆಯಲ್ಲಿ ತೊಡಗಿದರು. ಇದನ್ನು ಗಮನಿಸಿದಾಗ, ಬಹುತೇಕ ಜೈನ ಮತ್ತು ಜೈನೇತರ ಕವಿಗಳು ಪಾರಾಮಾರ್ಥಿಕ ಪುಣ್ಯ ಲಭಿಸುವಂತೆ ಮುಕ್ತಿಯ ಕಾಯಕದಲ್ಲಿ ಪ್ರವರ್ತರಾದರು. ಪಂಪನಿಂದ ಹರಿದಾಸರವರೆಗಿನ ಒಟ್ಟು ಮುಕ್ತಿಯ ಸ್ವರೂಪವನ್ನು ಈ ಕೃತಿಯು ತಿಳಿಸುತ್ತದೆ.

**೨. ವೈಯಕ್ತಿಕ ಪ್ರಕಟಿತ ಕೃತಿಗಳು**

**೧. ಕೃತಿ ಪ್ರವೇಶ (ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೭)**

ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಸ್ಕೃತ ಮತ್ತು ಕನ್ನಡದಲ್ಲಿ ಆಳವಾದ ವ್ಯಾಸಂಗ ಮಾಡಿದವರು. ಅವರ ವಿದ್ಯಾವ್ಯಾಸಂಗ ವಿಶಾಲವಾದುದು. ಮಲ್ಲೇಪುರಂ ಅವರ ಸಾಹಿತ್ಯ ವಿಮರ್ಶೆ, ಅನುವಾದ, ಗ್ರಂಥಸಂಪಾದನೆ, ಕೋಶರಚನೆ ಶಂಬಾ ಅಧ್ಯಯನ ಇತ್ಯಾದಿ ಸಾಹಿತ್ಯ ಕೃಷಿಯ ಬಗ್ಗೆ ಸಮೀಕ್ಷಾತ್ಮಕ ಲೇಖನಗಳು ಇಲ್ಲಿವೆ. ಕನ್ನಡ ಸಾಹಿತ್ಯಕ್ಕೆ ಶಂ.ಬಾ.ಜ್ಯೋಷಿ ಅವರನ್ನು ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ನಾಡಿನ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಪ್ರೊ. ಮಲ್ಲೇಪುರಂ ಅವರ ಸಮಗ್ರ ಕೃತಿಗಳ ಅವಲೋಕನವನ್ನು ಈ ಕೃತಿಯು ಒಳಗೊಂಡಿದೆ.

**೩. ಸಂಪಾದಿತ ಕೃತಿಗಳು**

**೧. ಹಸ್ತಪ್ರತಿ ವ್ಯಾಸಂಗ–೩: ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ (ಪ್ರಸಾರಾಂಗ, ಕವಿವಿ,ಹಂಪಿ ೨೦೦೨)**

ಹಸ್ತಪ್ರತಿಶಾಸ್ತ್ರ ವಿಭಾಗವು ಹಮ್ಮಿಕೊಂಡ ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ ಎಂಬ ವಿಚಾರಸಂಕಿರಣದಲ್ಲಿ ಮಂಡಿತವಾದ ಮತ್ತು ಪೂರಕವಾದ ೧೪ ಲೇಖನಗಳು ಇದರಲ್ಲಿ ಸಂಗ್ರಹಿತವಾಗಿವೆ. ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ, ಕನ್ನಡ ಭಾಷೆಯ ಕಂಪ್ಯೂಟರ್ ಸಂಸ್ಕರಣೆ ಇಂತಹ ಹಸ್ತಪ್ರತಿ ಮತ್ತು ಕಂಪ್ಯೂಟರ್‌ನ ಹೊಸಸಾಧ್ಯತೆಗಳನ್ನು ಕುರಿತು ವಿವಿಧ ವಿದ್ವಾಂಸರು ವ್ಯಕ್ತಪಡಿಸಿದ ಅಪೂರ್ವ ಚಿಂತನೆಗಳು ಇಲ್ಲಿ ಸಂಗ್ರಹಿತವಾಗಿವೆ.

**೨. ಹಸ್ತಪ್ರತಿ ವ್ಯಾಸಂಗ–೪ ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು (ಪ್ರಸಾರಾಂಗ, ಕವಿವಿ,ಹಂಪಿ ೨೦೦೩)**

ಹಸ್ತಪ್ರತಿಶಾಸ್ತ್ರ ವಿಭಾಗವು ಕೇಂದ್ರ ಸಾಹಿತ್ಯ ಅಕಾಡೆಮಿ ಬೆಂಗಳೂರು ಪ್ರಾದೇಶಿಕ ಕಛೇರಿ ಸಹಯೋಗದಲ್ಲಿ ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು ಎಂಬ ರಾಷ್ಟ್ರೀಯ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಆ ಕಾರ್ಯಾಗಾರದಲ್ಲಿ ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಕುರಿತು ನಾಡಿನ ವಿವಿಧ ಅಧ್ಯಯನ ಕ್ಷೇತ್ರದ ವಿದ್ವಾಂಸರಿಂದ, ಪರಿಣತರಿಂದ ಮಂಡಿತವಾದ ಸಂಪ್ರಬಂಧಗಳು, ಪ್ರತಿಕ್ರಿಯೆಗಳು ಈ ಸಂಕಲನದಲ್ಲಿ ಅಡಕವಾಗಿವೆ. ಈ ಕೃತಿಯು ಹಸ್ತಪ್ರತಿ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿದೆ.

**೩. ಹಸ್ತಪ್ರತಿ ವ್ಯಾಸಂಗ–೬ (ಪ್ರಸಾರಾಂಗ, ಕವಿವಿ,ಹಂಪಿ ೨೦೦೬)**

ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರತಿವರ್ಷ ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ಏರ್ಪಡಿಸುತ್ತದೆ. ೨ನೇ ಸಮ್ಮೇಳನವನ್ನು ಸಂಕೇಶ್ವರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ಹಿರಿಯ ವಿದ್ವಾಂಸ ಕೆ.ಜಿ.ಕುಂದಣಗಾರ ಸಂಸ್ಮರಣೆ, ಹಸ್ತಪ್ರತಿ ಸಂಕಥನ, ಬೆಳಗಾವಿ ಜಿಲ್ಲೆಯ ಹಸ್ತಪ್ರತಿ ಸಂಪತ್ತು ಹೀಗೆ ಮೂರು ಭಾಗಗಳನ್ನು ಈ ಕೃತಿಯು ಒಳಗೊಂಡಿದೆ. ಈ ಕೃತಿಯು ಹಸ್ತಪ್ರತಿಶಾಸ್ತ್ರದ ಎಲ್ಲೆಯನ್ನು ವಿಸ್ತರಿಸುತ್ತದೆ.

**೪. ಹಸ್ತಪ್ರತಿ ವ್ಯಾಸಂಗ –೧೦ (ಪ್ರಸಾರಾಂಗ, ಕವಿವಿ,ಹಂಪಿ ೨೦೧೧)**

ಹಸ್ತಪ್ರತಿಶಾಸ್ತ್ರ ವಿಭಾಗವು ಪ್ರತಿ ವರ್ಷವು ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನವನ್ನು ನಾಡಿನ ಸಂಘಸಂಸ್ಥೆ, ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ನಡೆಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಆರನೇ ಹಸ್ತಪ್ರತಿ ಸಮ್ಮೇಳನವನ್ನು ಬಸವನಬಾಗೇವಾಡಿಯ ಶ್ರೀ ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ಹಿರಿಯ ವಿದ್ವಾಂಸ ಶಿ.ಶಿ.ಬಸವನಾಳ ಸಾಹಿತ್ಯ ಸ್ಮರಣೆ, ಲೌಕಿಕಶಾಸ್ತ್ರ ಸಾಹಿತ್ಯ ಹಸ್ತಪ್ರತಿಗಳು (ಯೋಗಶಾಸ್ತ್ರ, ಗಣಿತಶಾಸ್ತ್ರ, ನೀತಿಶಾಸ್ತ್ರ, ಪ್ರಶ್ನೆಶಾಸ್ತ್ರ) ಬಸವನಬಾಗೇವಾಡಿ ಪರಿಸರದ ಹಸ್ತಪ್ರತಿ ಸಂಪತ್ತು ಹೀಗೆ ಮೂರು ಭಾಗಗಳನ್ನು ಈ ಕೃತಿಯು ಒಳಗೊಂಡಿರುತ್ತದೆ.

**೫. ಹಸ್ತಪ್ರತಿ ಅಧ್ಯಯನ (ಸಂಪುಟ–೮, ಸಂಚಿಕೆ ೧,೨(ಸಂಯುಕ್ತ ಸಂಚಿಕೆ) ೨೦೧೨, ಪ್ರಸಾರಾಂಗ, ಕವಿವಿ,ಹಂಪಿ)**

ಹಸ್ತಪ್ರತಿಶಾಸ್ತ್ರ ವಿಭಾಗವು 'ಹಸ್ತಪ್ರತಿ ಅಧ್ಯಯನ' ಎಂಬ ಅರ್ಧವಾರ್ಷಿಕ ನಿಯತಕಾಲಿಕೆಯನ್ನು ಹೊರತರಲಾಗುತ್ತಿದ್ದು, ನಾಡಿನ ವಿದ್ವಾಂಸರಿಂದ ಬರೆಸಲ್ಪಟ್ಟ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಇಲ್ಲಿ ಪ್ರಕಟವಾಗಿವೆ. ಹಂಬಲ, ಆಲೇಖ, ವಿಲೋಕನ, ವರಸೆ, ಅವಲೋಕನ, ಹಳೆಯ ಹೊನ್ನು, ಸವಾಂದ, ಸಂಚಿ ಎಂಬ ೮ ವಿಭಾಗಗಳನ್ನು ಒಳಗೊಂಡ ಈ ಕೃತಿಯು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಹೊಸ ಸಾಧ್ಯತೆಗಳನ್ನು ಬಿಚ್ಚಿಡುತ್ತದೆ.

## ೧೫. ಪ್ರಕಟಿತ ಪ್ರಮುಖ ಲೇಖನಗಳು

**೧. ಗಾಣದ ಕಲೆ (ಕರಕುಶಲ ಕಲೆಗಳು ವಿಶ್ವಕೋಶ, ಪ್ರಸಾರಾಂಗ ಕವಿವಿ. ಹಂಪಿ, ೨೦೦೦)**

ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ಬೆಲ್ಲವನ್ನು ತಯಾರಿಸುವ ಆಲೆಮನೆಯ ಪಾತ್ರ ಬಹುದೊಡ್ಡದು. ಅಂತೆಯೇ ಇಲ್ಲಿ ಗಾಣವಾಡುವ ಕಲೆ (ಕ್ರಿಯೆ) ಯೂ ಶ್ರಮದಾಯಕ ದುಡಿಮೇಯೆ ಸರಿ. ಮುಖ್ಯವಾಗಿ ಬೆಲ್ಲದ ಗಾಣಗಳು ಮತ್ತು ಎಣ್ಣೆಗಾಣಗಳು ಈ ಎರಡು ಪಾರಂಪರಿಕ ಗಾಣಗಳ ಸ್ವರೂಪ, ನಂಬಿಕೆಗಳು ಹಾಗೂ ಕಾರ್ಯನಿರ್ವಹಣೆಯನ್ನು ಕುರಿತು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

**೨. ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯಲ್ಲಿನ ಮುಕ್ತಿಯ ಪರಿಕಲ್ಪನೆ (ಕಾಯಕಯೋಗಿ ದಿ.ಮೈಲಾರಪ್ಪ ಮೆಣಸಗಿ ಅವರ ಸಂಸ್ಮರಣ ಗ್ರಂಥ, ವಿದ್ಯಾನಿಧಿ ಪ್ರಕಾಶನ, ಗದಗ ೨೦೦೨)**

ವಡ್ಡಾರಾಧನೆ ಕನ್ನಡ ಮೊದಲ ಗದ್ಯ ಗ್ರಂಥ ಅಂತೆಯೆ ಜೈನಧರ್ಮದ ಆಚಾರ್ಯರ ಪವಿತ್ರ ಧಾರ್ಮಿಕ ಕೃತಿ. ಜೈನ ತತ್ವಾಚರಣೆಯ ಹಿನ್ನೆಲೆಯಲ್ಲಿ ಮಾನವನ ಮೋಕ್ಷ ಸಾಧನೆಯನ್ನು ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

**೩. ಕನ್ನಡ ಗ್ರಂಥಸಂಪಾದನೆ : ಜನಪ್ರಿಯ ಆವೃತ್ತಿಗಳು (ಹಸ್ತಪ್ರತಿ ಅಧ್ಯಯನ, ಸಂಪುಟ–೮, ಸಂಚಿಕೆ ೧,೨ (ಸಂಯುಕ್ತ ಸಂಚಿಕೆ), ಪ್ರಸಾರಾಂಗ, ಕನ್ನಡ ವಿವಿ.ಹಂಪಿ, ೨೦೧೨)**

ಜನಪ್ರಿಯ ಸಂಪಾದನೆಯಲ್ಲಿ ಪಂಡಿತ ಆವೃತ್ತಿಯಲ್ಲಿರುವಂತೆ ಪಾಠಾಂತರಗಳಿರುವುದಿಲ್ಲ. ಬಿನ್ನ ಪಾಠಗಳ ದಾಖಲೀಕರಣ, ಪಾಠಸಂಕಲನ ಪಾಠಗಳ ನಿರ್ವಚನ ಇವುಗಳ ಗೋಜು ಇಲ್ಲ. ಇಲ್ಲಿ ಜನಸಾಮಾನ್ಯರಿಗೆ ಪಠ್ಯ ಅರ್ಥವಾದರೆ ಸಾಕು. ಅದರ ತಾತ್ವಿಕ ಸ್ವರೂಪವನ್ನು ಕುರಿತು. ಈ ಲೇಖನದಲ್ಲಿ ಚರ್ಚೆಮಾಡಲಾಗಿದೆ.

**೪. ದೇಸಿ ಸಾಹಿತ್ಯ ಸಂಪಾದನೆ : ಸ್ಥೂಲ ನೋಟ (ಹಸ್ತಪ್ರತಿ ವ್ಯಾಸಂಗ –೧ ಪ್ರಸಾರಾಂಗ ಕವಿವಿ, ಹಂಪಿ ೨೦೦೨)**

ದೇಸಿ ಸಾಹಿತ್ಯ ಸಂಪಾದನೆಯೆಂದರೆ ಭಾಷೆಯ ದೃಷ್ಠಿಯಿಂದ ಶುದ್ಧವಾದ, ಕಥೆ ದೃಷ್ಟಿಯಿಂದ ಪೂರ್ಣವಾದ ಪಠ್ಯ. ವಿಶೇಷವಾಗಿ ಮಧ್ಯಕಾಲೀನ ಪಠ್ಯಗಳು ಇದರ ಕಕ್ಷೆಯಲ್ಲಿ ಬರುತ್ತವೆ. ದೇಸಿ ಸಾಹಿತ್ಯ ಸಂಪಾದನೆಯ ತಾತ್ವಿಕ ಸ್ವರೂಪವನ್ನು ಕುರಿತು ಈ ಲೇಖನದಲ್ಲಿ ಚರ್ಚೆಮಾಡಲಾಗಿದೆ.

**೫. ಕನ್ನಡ ಹಸ್ತಪ್ರತಿಗಳು : ಚಾರಿತ್ರಿಕ ಸಂಕಥನ (ಹಸ್ತಪ್ರತಿ ವ್ಯಾಸಂಗ –೬ ಪ್ರಸಾರಾಂಗ ಕವಿವಿ, ಹಂಪಿ ೨೦೦೬)**

ಹಸ್ತಪ್ರತಿಗಳು ಒಂದು ನಾಡಿನ ಸಾಂಸ್ಕೃತಿಕ ಆಸ್ತಿ, ಚಾರಿತ್ರಿಕ ಹಸ್ತಪ್ರತಿಗಳು ಒಂದು ನಾಡಿನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಉದಾಹರಣೆಗೆ, ಸಿರುಮಣನಾಯಕನ ಸಾಂಗತ್ಯ, ಕುಮಾರರಾಮನ ಸಾಂಗತ್ಯ ಮುಂತಾದುವುಗಳನ್ನು ಹೆಸರಿಸಬಹುದು. ಇಂತಹ ಚಾರಿತ್ರಿಕ ಹಸ್ತಪ್ರತಿಗಳ ಮಹತ್ವವನ್ನು ಗುರುತಿಸಲಾಗಿದೆ.

**೬. ಬಿಜಾಪುರ ಜಿಲ್ಲೆಯ ಹಸ್ತಪ್ರತಿ ಸಂಪತು (ಹಸ್ತಪ್ರತಿ ವ್ಯಾಸಂಗ –೭ ಪ್ರಸಾರಾಂಗ ಕವಿವಿ, ಹಂಪಿ ೨೦೦೭)**

ಅಖಂಡ ಬಿಜಾಪುರ ಜಿಲ್ಲೆಯು ಸಾಂಸ್ಕೃತಿಕ ಹಿನ್ನೆಲೆ ಇರುವ ಪ್ರಮುಖ ಸ್ಥಳವಾಗಿದೆ. ಇಲ್ಲಿ ಅನೇಕ ಶರಣರು, ದಾಸರು, ಸಂತರು, ಹುಟ್ಟಿ ಬೆಳೆದಿದ್ದಾರೆ. ಇದರಿಂದ ಸಹಜವಾಗಿ ಹಸ್ತಪ್ರತಿಗಳು ಉಗಮಗೊಂಡವು. ಈ ಜಿಲ್ಲೆಯಲ್ಲಿ ದೊರೆತ ಹಸ್ತಪ್ರತಿಗಳನ್ನು ೧. ಮಠಮಾನ್ಯಗಳ ಹಸ್ತಪ್ರತಿ ಸಂಗ್ರಹ, ೨. ವ್ಯಕ್ತಿಗತ ಹಸ್ತಪ್ರತಿ ಸಂಗ್ರಹ ಎಂದು ಎರಡು ವಿಧವಾಗಿ ವರ್ಗೀಕರಿಸಿ ಈ ಲೇಖನದಲ್ಲಿ ಚರ್ಚಿಸಲಾಗಿದೆ.

**೭. ಕನ್ನಡ ಗ್ರಂಥಸಂಪಾದನೆ ಮತ್ತು ಬಿ.ಎಸ್.ಸಣ್ಣಯ್ಯ (ಹಸ್ತಪ್ರತಿ ವ್ಯಾಸಂಗ –೮ ಪ್ರಸಾರಾಂಗ ಕವಿವಿ, ಹಂಪಿ ೨೦೦೭)**

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕ್ಷೇತ್ರಕ್ಕೆ ಬಿ.ಎಸ್.ಸಣ್ಣಯ್ಯನವರ ಕೊಡುಗೆ ಅಪಾರವಾದದು, ಈ ಲೇಖನದಲ್ಲಿ ಸಣ್ಣಯ್ಯನವರ ಸ್ವತಂತ್ರ ಕೃತಿಗಳೂ, ಸಂಪಾದನ ಕೃತಿಗಳೂ, ಸೂಚಿರಚನೆ ಕುರಿತು ಚರ್ಚಿಸಲಾಗಿದೆ.

**೮. ಕೆ.ಜಿ.ಕುಂದಣಗಾರ ಅವರ ಸಾಹಿತ್ಯ : ಒಂದು ಅವಲೋಕನ (ಹಸ್ತಪ್ರತಿ ವ್ಯಾಸಂಗ–೬ ಪ್ರಸಾರಾಂಗ ಕವಿವಿ, ಹಂಪಿ ೨೦೦೬)**

ಕನ್ನಡ ಪಾಂಡಿತ್ಯ ಕ್ಷೇತ್ರದಲ್ಲಿ ಕೆ.ಜಿ.ಕುಂದಣಗಾರ ಅವರದು ದೊಡ್ಡ ಹೆಸರು. ಸಾಹಿತ್ಯ, ಸಂಸ್ಕೃತಿ, ಭಾಷೆ, ಛಂದಸ್ಸು ಹೀಗೆ ಹಲವು ಕ್ಷೇತ್ರಗಳಲ್ಲಿ ಅವರ ಸಾಧನೆಯನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**೯. ಡಿ.ಎಲ್.ನರಸಿಂಹಾಚಾರ್ ಅವರನ್ನು ಕುರಿತು ಸಾಹಿತ್ಯ (ಡಿ.ಎಲ್.ನರಸಿಂಹಾಚಾರ್, ಶತಮಾನ ಸ್ಮರಣೆ ಪ್ರಸಾರಾಂಗ ಕವಿವಿ, ಹಂಪಿ)**

ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಡಿ.ಎಲ್.ಎನ್.ಅವರು ಒಂದು ಪಥವನ್ನು ರೂಪಿಸಿದರು. ಸಾಮಗ್ರಿ ಸಂಗ್ರಹ, ವ್ಯಾಖ್ಯಾನ, ವಿಶ್ಲೇಷಣೆ ನೆಲೆಯಲ್ಲಿ ಕನ್ನಡ ಅಧ್ಯಯನಕ್ಕೆ ವಿಶೇಷ ಅಡಿರಚನೆ ಹಾಕಿದರು. ಈ ಲೇಖನದಲ್ಲಿ ಡಿ.ಎಲ್.ಎನ್.ಅವರ ವ್ಯಕ್ತಿತ್ವ, ಸಾಧನೆಯನ್ನು ಕುರಿತು ಸ್ಥೂಲವಾಗಿ ಪರಿಚಯಿಸಲಾಗಿದೆ.

**೧೦. ಬಿ.ಬಿ.ಹೆಂಡಿ ಅವರ ಎರಡು ಸಂಪಾದನ ಕೃತಿಗಳು (ಸಿರಿಸಂಪದ, ಡಾ.ಬಿ.ವ್ಹಿ.ಶಿರೂರ ಅಭಿನಂದನಾ ಗಂಥ, ಡಾ.ಬಿವ್ಹಿ.ಶಿರೂರ ಅಭಿನಂದನಾ ಸಮಿತಿ, ಯಲಬುರ್ಗಾ, ೨೦೦೨)**

ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಶಾಖೆಯನ್ನು ಕಟ್ಟಿ ಬೆಳೆಸಿದವರಲ್ಲಿ ಹೆಂಡಿ ಅವರು ಪ್ರಮುಖರು ಅವರ ಕಾರ್ಯ ಕ್ಷೇತ್ರಗಳಲ್ಲಿ ಕಾವ್ಯಮೀಮಾಂಸೆ ಮತ್ತು ಗ್ರಂಥಸಂಪಾದನೆ ಪ್ರಮುಖವಾದವು. ಗ್ರಂಥಸಂಪಾದನೆಯಲ್ಲಿ ಅವರ ಸಾಧನೆಯನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**೧೧. ಎಂ.ಬಿ.ನೇಗಿನಹಾಳ ಅವರ ಸಾಹಿತ್ಯ : ಒಂದು ಅವಲೋಕನ (ಬೆಳಗಾವಿ ಜಿಲ್ಲೆಯ ವಿದ್ವತ್ಪರಂಪರೆ, ಲಿಂಗಾಯತ ಅಧ್ಯಯನ ಅಕಾಡೆಮಿ, ಬೆಳಗಾವಿ, ೨೦೦೭)**

ನೇಗಿನಹಾಳರು ಎಲೆಮರೆಯ ಕಾಯಂತೆ ಸಾಹಿತ್ಯ ಸೇವೆ ಮಾಡಿದವರು ಅವರ ಸಂಶೋಧನ ಬರಹಗಳನ್ನು ೫ ರೀತಿಯಾಗಿ ವಿಂಗಡಿಸಬಹುದು. ೧. ಕನ್ನಡ ಭಾಷೆ ಮತ್ತು ಸಾಹಿತ್ಯ ಶೋಧಗಳು, ೨. ಜನಾಂಗಿಕ ಅಧ್ಯಯನ, ೩. ಶಾಸನಗಳ ಅಧ್ಯಯನ, ೪. ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ೫. ಮೈಲಾರಲಿಂಗ ಮತ್ತು ಖಂಡೋಬ ಈ ಎಲ್ಲ ಅಂಶಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**೧೨. ಹಸ್ತಪ್ರತಿ ಗ್ರಂಥಸಂಪಾದನೆ : ಬಿ.ವಿ.ಮಲ್ಲಾಪುರ ಅವರ ಸಾಧನೆ (ಹಸ್ತಪ್ರತಿ ವ್ಯಾಸಂಗ ೯, ಪ್ರಸಾರಾಂಗ ಕನ್ನಡ ವಿವಿ.ಹಂಪಿ, ೨೦೧೦)**

ವಚನ ಸಾಹಿತ್ಯ ಸಂಪಾದನೆಯಲ್ಲಿ ಮಲ್ಲಾಪುರ ಅವರದು ದೊಡ್ಡ ಹೆಸರು ಅವರ ಪ್ರಭುಲಿಂಗಲೀಲೆ, ಅಲ್ಲಮನ ವಚನಗಳು ಗ್ರಂಥಸಂಪಾದನೆಗೆ ಒಳ್ಳೆಯ ಮಾದರಿ. ಅವರ ಗ್ರಂಥಸಂಪಾದನೆಯನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**೧೩. ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರ ಟೀಕು (ಬಸವಣ್ಣನವರ ವಚನಗಳು : ಪ್ರಾಚೀನ ಮತ್ತು ಆಧುನಿಕ ಟೀಕುಗಳು, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಪ್ರಭುದೇವರ ವಿರಕ್ತಮಠ ಸೊಂಡುರು, ೨೦೧೨)**

೧೨ನೇ ಶತಮಾನದಲ್ಲಿ ರಚನೆಗೊಂಡ ಬಸವಣ್ಣನವರ ವಚನಗಳಿಗೆ ಹುಮನಾಬಾದ ನಿರಂಜನಸ್ವಾಮಿಗಳು, ಸೋಮಶೇಖರ ಶಿವಯೋಗಿಗಳು, ಪರ್ವತ ಶಿವಯೋಗಿಗಳು, ರೇವಣಸಿದ್ಧಸ್ವಾಮಿಗಳು, ಗುರುಬಸವರಾಜ ದೇವರು ಹೀಗೆ ಹಲವಾರು ವಿದ್ವಾಂಸರು ಹಾಗೂ ಶ್ರೀಗಳು ಟೀಕುಗಳನ್ನು ಬರೆದಿದ್ದಾರೆ. 'ಟೀಕು'(ಟೀಕೆ) ಎಂದರೆ ಟಿಪ್ಪಣಿ, ವ್ಯಾಖ್ಯಾನ ಎಂದು ಕರೆಯಲಾಗಿದೆ. ಅದೇರೀತಿ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಬಸವಣ್ಣನವರ ಷಟ್ಸ್ಥಲದ ವಚನಗಳಿಗೆ ಬರದಿರುವ ಟೀಕಾ ಗ್ರಂಥ ಇದಾಗಿದೆ. ಬಸವಣ್ಣನವರ ವಚನಗಳು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವುದಷ್ಟೆ ಅಲ್ಲದೆ, ಬಸವಣ್ಣನವರ ವಚನಗಳ ವೈವಿಧ್ಯಮಯ ಅಧ್ಯಯನಕ್ಕೆ ತಿಪ್ಪೇರುದ್ರಸ್ವಾಮಿ ಅವರ ಟೀಕುಗಳು ತುಂಬಾ ನೆರವಾಗುತ್ತವೆ ಎಂಬ ಅಂಶವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**೧೪. ಭೈಷಜಶಾಸ್ತ್ರ (ಹಸ್ತಪ್ರತಿ ವ್ಯಾಸಂಗ ೧೨, ಪ್ರಸಾರಾಂಗ ಕನ್ನಡ ವಿವಿ.ಹಂಪಿ, ೨೦೧೨)**

ಕನ್ನಡದ ಸಾಂಪ್ರದಾಯಿಕ ಆಯುರ್ವೇದ ಲೌಕಿಕಶಾಸ್ತ್ರ ಸಾಹಿತ್ಯದಲ್ಲಿ ಭೈಷಜಶಾಸ್ತ್ರವು ತನ್ನದೆ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಹೆಸರಿನ ಓಲೇಗರಿ ಹಸ್ತಪ್ರತಿಯು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ಈ ಹಸ್ತಪ್ರತಿಯಲ್ಲಿ ಹುದುಗಿರುವ ಪಾರಂಪರಿಕ ದೇಸಿ ವೈದ್ಯ ಪದ್ಧತಿಯಿಂದ ಮಾನವನ ಬಹುಬಗೆಯ ಶಾರೀರಿಕ ರೋಗಗಳಿಗೆ ಪರಿಹಾರವಾಗಿ ನೀಡಿರುವ ಔಷಧೋಪಚಾರಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

**೧೫. ಶಿ.ಚ.ನಂದಿಮಠ : ವಿಮರ್ಶೆ ನೆಲೆ (ಹಸ್ತ್ರಪ್ರತಿ ವ್ಯಾಸಾಂಗ –೧೧ ಪ್ರಸಾರಾಂಗ ಕನ್ನಡ ವಿವಿ.ಹಂಪಿ, ೨೦೧೨)**

ಕನ್ನಡದ ಶ್ರೇಷ್ಠ ವಿದ್ವಾಂಸರಾದ ಶಿ.ಚ.ನಂದಿಮಠ ಅವರು ಚರಿತ್ರೆಕಾರರಾಗಿ, ಶಾಸನಾಧ್ಯಯನಕಾರರಾಗಿ, ಗ್ರಂಥಸಂಪಾದನಾಕಾರರಾಗಿ ಕೆಲಸ ಮಾಡಿದಂತೆ, ವಿಮರ್ಶೆ ಕ್ಷೇತ್ರದಲ್ಲಿಯೂ ಹಲವಾರು ಲೇಖನಗಳನ್ನು ರಚಿಸಿದ್ದಾರೆ. ಆ ಲೇಖನಗಳ ಸ್ವರೂಪವನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

**೧೬. ಕೆಂಭಾವಿ ಭೋಗಣ್ಣನ ಸಾಂಗತ್ಯ : ಒಂದು ವಿವೇಚನೆ (ಹಸ್ತಪ್ರತಿ ಅಧ್ಯಯನ, ಸಂಪುಟ–೮, ಸಂಚಿಕೆ ೧,೨ (ಸಂಯುಕ್ತ ಸಂಚಿಕೆ), ಪ್ರಸಾರಾಂಗ, ಕನ್ನಡ ವಿವಿ.ಹಂಪಿ, ೨೦೧೨)**

ಕೆಂಭಾವಿ ಭೋಗಣ್ಣ ಬಸವಾದಿಗಳಿಗು ಹಿಂದಿನ ಆದ್ಯ ಶರಣದಲ್ಲಿ ಒಬ್ಬ. ಜೇಡರದಾಸಿಮ್ಮಯ್ಯನ ಹಿರಿಯ ಸಮಕಾಲಿನ, ಭೋಗಣ್ಣ ಹರಿಹರನಿಂದ ಮೊದಲುಗೊಂಡು ಇನ್ನೂ ಅನೇಕ ಶಿವಶರಣರ ಕಾವ್ಯಗಳಿಗೆ ವಸ್ತುವಾಗಿದ್ದಾನೆ. ಈತನ ನಡವಳಿಕೆ, ಪೂಜಾ ಕೈಂಕರ್ಯ, ಜಂಗಮ ಸೇವೆ ಮುಂತಾದವು ಸರ್ವಮಾನವತಾ ದೃಷ್ಟಿಗೆ ಸಂಕೇತ ಎಂಬಂತೆ ಚಿತ್ರಿತವಾಗಿರುವ ಕಥಾಪರಂಪರೆಯೊಂದು ಕನ್ನಡದಲ್ಲಿ ಬೆಳೆದು ಬಂದಿದೆ. ಪ್ರಸ್ತುತ ಚೆನ್ನಯ್ಯ ಎಂಬ ಕವಿಯಿಂದ ರಚಿಸಲ್ಪಟ್ಟಿರುವ ಕೆಂಭಾವಿ ಭೋಗಣ್ಣನ ಸಾಂಗತ್ಯ ಎಂಬ ಕೃತಿಯನ್ನು ಇಲ್ಲಿ ಪರಿಚಯಿಸಲಾಗಿದೆ.

**೧೭. ಓಲೆಮಠ–ಕೂಲಿಮಠ (ಹಸ್ತ್ರಪ್ರತಿ ವ್ಯಾಸಾಂಗ –೧೩ ಪ್ರಸಾರಾಂಗ ಕನ್ನಡ ವಿವಿ.ಹಂಪಿ, ೨೦೧೪)**

ಸಾಮಾನ್ಯವಾಗಿ ವೀರಶೈವ ಪರಂಪರೆಯಲ್ಲಿ ಕಂಡು ಬರುವ ಟೀಕಿನಮಠ, ಓಲೆಮಠ, ಸಾಲಿಮಠ, ಕೂಲಿಮಠ. ಇವುಗಳು ಮದ್ಯಕಾಲೀನ ಸಂದರ್ಭದಲ್ಲಿ, ವಚನ ಚಳುವಳಿಯ ನಂತರದ ಕಾಲಘಟ್ಟದಲ್ಲಿ ಕಾಣಿಸಿಕೊಂಡು ಹಸ್ತಪ್ರತಿ ಉತ್ಪಾದನೆ, ಲಿಪೀಕರಣ ಹಾಗೂ ಪ್ರಸರಣ ಕಾರ್ಯವನ್ನು ಕೈಗೊಂಡವು. ಈ ಸಾಲಿನಲ್ಲಿ ಕಂಡುಬರುವ ಓಲೆಮಠ ಹಾಗೂ ಕೂಲಿಮಠಗಳನ್ನು ಪರಿಚಯಾತ್ಮಕವಾಗಿ ವಿವರಿಸಲಾಗಿದೆ.

**೧೮. ಪ್ರತೀಕರಣದ ದಾರ್ಶನಿಕ ನೆಲೆಗಳು (ಹಸ್ತಪ್ರತಿ ವ್ಯಾಸಂಗ ೧೪, ಪ್ರಸಾರಾಂಗ ಕನ್ನಡ ವಿವಿ.ಹಂಪಿ, ೨೦೧೫)**

ಹಸ್ತಪ್ರತಿಗಳು ಒಂದು ಕಾಲಘಟ್ಟದ ಸಾಂಸ್ಕೃತಿಕ ಪಠ್ಯಗಳು. ಅವುಗಳನ್ನು ಕೇವಲ ಗ್ರಂಥಸಂಪಾದನೆಗೆ ಮಾತ್ರ ಸೀಮಿತಗೊಳಿಸಬಾರದು. ಅವುಗಳನ್ನು ಸಾಂಸ್ಕೃತಿಕ ಆಕರಗಳೆಂದು ಪರಿಭಾವಿಸಬೇಕಾಗುತ್ತದೆ. ಕಾವ್ಯ, ಶಾಸನಗಳಂತೆ ಹಸ್ತಪ್ರತಿಗಳಲ್ಲಿ ವ್ಯಕ್ತವಾಗಿರುವ ಲಿಪಿಕಾರರ ಪ್ರಶಸ್ತಿಗಳು (ಪುಷ್ಪಿಕೆಗಳು) ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಳ್ಳಲು ಅಥವಾ ಪುನರ್ ರಚಿಸಲು ತುಂಬಾ ನೆರವಾಗುತ್ತವೆ. ಇಂತಹ ವಿವರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಲಾಗಿದೆ.

## ೧೬. ಪಿಎಚ್.ಡಿ ಮಾರ್ಗದಶನ

| ಕ್ರ.ಸಂ | ಅಭ್ಯರ್ಥಿಗಳು | ಶಿರ್ಷಿಕೆ | ಪದವಿ ಘೋಷಿಸಿದ ದಿನಾಂಕ |
|---|---|---|---|
| ೦೧ | ಎ.ಎಂ.ರಾಜಶೇಖರಯ್ಯ | ಕನ್ನಡ ಚುಟುಕ ಸಾಹಿತ್ಯ : ಸಾಮಾಜಿಕ ಪ್ರಜ್ಞೆ | ೦೨–೧೨–೨೦೧೦ |
| ೦೨ | ಲಿಂಗಪ್ಪ | ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ | ೦೬–೦೨–೨೦೧೩ |
| ೦೩ | ಟಿ.ನಂದಿನಿ | ಗಲಗಲಿ ಅವ್ವನವರ ಜೀವನ ಮತ್ತು ಕೃತಿಗಳು | ೨೨–೦೬–೨೦೧೩ |

| | | | |
|---|---|---|---|
| ೦೪ | ಮಠಪತಿ ಶ್ರೀಶೈಲ ಗುರುಸಿದ್ಧಯ್ಯ | ನಿಡಗುರುಕಿ ಜೀವೂಬಾಯಿ ಅವರ ಕೀರ್ತನೆಗಳು : ಒಂದು ಅಧ್ಯಯನ | ೨೪-೦೨-೨೦೧೫ |
| ೦೫ | ಪ್ರಭಾಕರ ಎಂ. | ಸೊಬಗಿನ ಸೋನೆ : ಒಂದು ಅಧ್ಯಯನ | ೧೪-೦೩-೨೦೧೬ |
| ೦೬ | ಬೋರೇಶಿ ಇ. | ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಂಸ್ಕೃತಿಕ ಅನನ್ಯತೆ | ೧೦-೦೪-೨೦೧೬ |

**೧. ಕನ್ನಡ ಚುಟುಕ ಸಾಹಿತ್ಯ : ಸಾಮಾಜಿಕ ಪ್ರಜ್ಞೆ**

ಈ ನಿಬಂಧದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಜಾನಪದ ಸಾಹಿತ್ಯ ಚುಟುಕುಗಳನ್ನು ಸಮಾಜಮುಖಿ ನೆಲೆಯಲ್ಲಿ ಚರ್ಚೆ ಮಾಡಲಾಗಿದೆ. ಆಧುನಿಕ ಮತ್ತು ಆಧುನಿಕ ಪೂರ್ವ ಬರಹಗಾರರು ತಮ್ಮ ಕಾಲಕ್ಕೆ ಚುಟುಕು ಮಾದರಿಯ ಬಿಡಿಗವನಗಳನ್ನೇ ಆಯ್ಕೆ ಮಾಡಿಕೊಂಡದ್ದು ಐತಿಹಾಸಿಕ ಮಹತ್ವದ ಸಂಗತಿಯಾಗಿದೆ. ಚುಟುಕುಗಳು ಯಾವುದೇ ಭಾವುಕ ಸಂಗತಿಗಳನ್ನು ಹೇಳದೇ, ಕಥೆಯನ್ನು ಬಿತ್ತರಿಸದೇ ಜನಸಮೂಹಕ್ಕೆ ಅಗತ್ಯವೆನ್ನಿಸುವ ತಿಳಿವಳಿಕೆ ಅಥವಾ ಜ್ಞಾನವನ್ನೇ ಅತ್ಯಂತ ಪರಿಣಾಮಕಾರಿಯಾಗಿ ಬಿಚ್ಚಿಡುತ್ತವೆ. ಚುಟುಕುಗಳು ಸಮಾಜವನ್ನೇ, ಮನುಷ್ಯರ ಸಮೂಹವನ್ನೇ ಅತ್ಯಂತ ಗುರಿಯಿಟ್ಟುಕೊಂಡು ಹೇಳಿದಂತಹ ತೀಕ್ಷ್ಣ ಮಾತುಗಳಾಗಿವೆ. ಇಡೀ ಚುಟುಕು ಸಾಹಿತ್ಯ ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆಯೆಂದರೆ ಅಚ್ಚರಿಪಡಬೇಕಾಗಿಲ್ಲ. ಚುಟುಕು ಕವಿ ಸಮಾಜದ ಅಂಕು-ಡೊಂಕು, ಏರು ಪೇರುಗಳನ್ನು ಕಂಡು ವಿಡಂಬಿಸಿದ್ದಾನೆ, ವಿಮರ್ಶಿಸಿದ್ದಾನೆ. ಚುಟುಕು ಕವಿ ಸಮಾಜಶಾಸ್ತ್ರಜ್ಞನ ಚಿಕಿತ್ಸಕ ಬುದ್ಧಿಯನ್ನು ಪಡೆದವನಾದುದರಿಂದ ಸಮಾಜದ ಸಾಂಸ್ಕೃತಿಕ ವಲಯವನ್ನು ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ. ಈ ನಿಬಂಧ ಆ ಕುರಿತು ಪರಿಣಾಮಕಾರಿ ಚಿತ್ರಣ ನೀಡುತ್ತದೆ. ಚುಟುಕುಗಳಲ್ಲಿ ಬಡತನ, ಹಸಿವು, ಹಾಸ್ಯ, ಅಂಧಾನುಕರಣೆಗಳ ವಾಸ್ತವ ಚಿತ್ರಣಗಳಿರುವಂತೆ ಸಾಂಸ್ಕೃತಿಕ ಮೌಲ್ಯಗಳಾದ ಅನುಕಂಪ, ಸಹೃದಯತೆ, ಸಹನಶೀಲತೆ ಮೊದಲಾದ ಸಾಮಾಜಿಕ ನೀತಿ ವಿಚಾರಗಳು ದೇಸಿ ಭಾಷೆಯಲ್ಲಿ ಅಭಿವ್ಯಕ್ತಗೊಂಡಿವೆ. ಈ ಎಲ್ಲಾ ಕಾರಣಗಳಿಂದ ಚುಟುಕುಗಳು ಅತ್ಯಂತ ತೀವ್ರವಾಗಿ ಓದುಗರ ಹೃದಯ ಮುಟ್ಟಿವೆ. ನಿಬಂಧಕಕಾರರಾದ ಎ.ಎಂ.ರಾಜಶೇಖರಯ್ಯ ಅವರು ಈ ಗ್ರಹಿಕೆಯನ್ನು ದೃಢಪಡಿಸಿಕೊಂಡು ಚುಟುಕುಗಳ ಸಾಮಾಜಿಕ ಪ್ರಜ್ಞೆಯನ್ನು ಕುರಿತು ಅರ್ಥಪ್ರರ್ಣವಾಗಿ ವಿಶ್ಲೇಷಿಸಿದ್ದಾರೆ.

**೨. ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ**

ಪ್ರಸ್ತುತ ನಿಬಂಧವು ಗುಂಡಬ್ರಹ್ಮಯ್ಯ ಎಂಬ ಶರಣರ ಕಥೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಹದಿನಾರು ಮತ್ತು ಹದಿನೇಳನೇ ಶತಮಾನದಲ್ಲಿ ಶರಣರನ್ನು ದೈವತ್ವದ ನೆಲೆಗೇರಿಸಿ ಕಾವ್ಯ ರಚನೆಮಾಡಿದರು. ಕಲ್ಯಾಣ ಕ್ರಾಂತಿಯ ನಂತರ ಶರಣ ಸಾಹಿತ್ಯವು ಧಾರ್ಮಿಕ ಮತ್ತು ಸಾಮಾಜಿಕ ಆಂದೋಲನದತ್ತ ಮುಖಮಾಡಿತು. ಆಂಧ್ರದ ಓರಂಗಲ್ಲಿನ ಕಾಕತೀಯರ ಪೋಷಣೆಯಲ್ಲಿ ಉಳಿದು ಬೆಳೆದು ಬಂದಿತು ಶರಣ ಸಾಹಿತ್ಯ. ಗುಂಡಬ್ರಹ್ಮಯ್ಯಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಶೂಲದ ಹಬ್ಬದ ಆಚರಣೆಯ ಮೂಲಕ ಬೆಳಕಿಗೆ ಬಂದರು. ಕಂಪಿಲಿ ಪರಿಸರದ ಕುಮಾರರಾಮ ತನ್ನ ತಂದೆಯ ಅಪ್ಪಣೆಯ ಮೇರೆಗೆ ಕರ್ನಾಟಕದ ಪರಿಸರದಲ್ಲಿ ಶೂಲದ ಹಬ್ಬವನ್ನು ಆಚರಣೆಗೆ ತಂದನು. ತದನಂತರ ಈ ಹಬ್ಬವು ಕರ್ನಾಟಕದಾದ್ಯಂತ ಪ್ರಸರಣಗೊಂಡಿತು. ಈ ಅಂಶವನ್ನು ಪ್ರಸ್ತುತ ನಿಬಂಧವು ಸವಿವರವಾಗಿ ತಿಳಿಸಿಕೊಡುತ್ತದೆ. ಈ ಆಚರಣೆಯನ್ನು ವಿಸ್ತೃತ ವಿಶ್ಲೇಷಣೆ ಹಾಗೂ ವಿವೇಚನೆಗೊಳಪಡಿಸಲಾಗಿದೆ. ಗುಂಡುಬ್ರಹ್ಮಯ್ಯಗಳು ಪರೋಪಕಾರ ತತ್ವವನ್ನು ಶಿರಸಾವಹಿಸಿ ಪಾಲಿಸಿದರು. ಕಷ್ಟಕ್ಕೆ ಸಿಲುಕಿದಾಗ ಶಿವನಪಾದ ಸೇರುವುದಕ್ಕೂ ಸಿದ್ಧರಾದರು. ಒಂದು ಹಂತದಲ್ಲಿ ಬಸವೋತ್ತರ ಯುಗದಲ್ಲಿ ರಾಜಪ್ರಭುತ್ವವು ಶರಣರ ಪ್ರಭಾವದ ಕಡೆಗೆ ಹೊರಳಿದಾಗ ತಮ್ಮ ಜೀವನವನ್ನು ಅಮೂರ್ತತ್ವದ ಕಡೆಗೆ ಕೊಂಡೊಯ್ದರು. ಎಂಬ ಸಂದೇಶವು ಈ ನಿಬಂಧದಲ್ಲಿ ಅಡಕವಾಗಿದೆ. ನಿಬಂಧಕಾರರಾದ ಲಿಂಗಪ್ಪ ಅವರು ನಿಬಂಧ ಸಿದ್ಧತೆಗೆ ತುಂಬ ಶ್ರಮವಹಿಸಿದ್ದಾರೆ. ಲಿಖಿತ ದಾಖಲೆಗಳನ್ನಷ್ಟೇ ಅವಲಂಬಿಸದೇ ಕ್ಷೇತ್ರಕಾರ್ಯಕ್ಕೂ ಒತ್ತು ನೀಡಿದ್ದಾರೆ.

**೩. ಗಲಗಲಿ ಅವ್ವನವರ ಜೀವನ ಮತ್ತು ಕೃತಿಗಳು**

ಹದಿನೇಳನೇ ಶತಮಾನದಲ್ಲಿ ಆಗಿಹೋದ ಪ್ರಥಮ ಹರಿದಾಸ ಮಹಿಳೆ ಗಲಗಲಿ ಅವ್ವನವರು. ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ತನ್ನದೇ ಆದ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. ಅವ್ವನವರ ಜೀವನ ಹಾಗೂ ಕೃತಿಗಳನ್ನು ಕುರಿತು ತಲಸ್ಪರ್ಶಿಯ ಅಧ್ಯಯನವನ್ನು ಒಳಗೊಂಡಿರುವ ಮಹತ್ವಪೂರ್ಣ ಸಂಶೋಧನಾತ್ಮಕ ಅಧ್ಯಯನದ ಮೊತ್ತವೇ ಪ್ರಸ್ತುತ ನಿಬಂಧ. ಕನ್ನಡದ ಮಹಿಳಾ ಹರಿದಾಸ ಪರಂಪರೆಯ ಪ್ರಥಮ ಹಾಗೂ ಪ್ರಮುಖ ಹರಿದಾಸರಾಗಿ ಕಾಣಿಸಿಕೊಳ್ಳುವ ಅವ್ವ ತಮ್ಮ ರಚನೆಗಳಲ್ಲಿ ಸಾಮಾಜಿಕ ಕಳಕಳಿಯನ್ನು ಪ್ರತಿಪಾದಿಸುತ್ತಾ, ವರ್ಗಸಂಘರ್ಷವನ್ನು ವಿರೋಧಿಸಿದ್ದಾರೆ. ಅಂದಿನ ವೈದಿಕ ಪರಂಪರೆಯಲ್ಲಿ ಕಂಡುಬರುವ ಮಹಿಳೆಯ ಆಂತರಿಕ ಹಾಗೂ ಸಾಮಾಜಿಕ ಒಳ ಹಾಗೂ ಹೊರ ಬದುಕಿನ ವ್ಯಷ್ಠಿ ಹಾಗೂ ಸಮಷ್ಠಿಗಳ ನೆಲೆಯಲ್ಲಿ ಅಡಗಿರುವ ಅನೇಕ ದ್ವಂದ್ವಗಳಿಗೆ ಖಚಿತವಾದ ಅರ್ಥವನ್ನು ಹುಡುಕಲು ಪ್ರಯತ್ನಿಸಿದ್ದಾರೆ. ಇಂತಹ ಸೂಕ್ಷ್ಮ ಹಾಗೂ ಮಹತ್ವಪೂರ್ಣ ಸಂಗತಿಗಳನ್ನು ಸಂಶೋಧಕರು ಕೂಲಂಕುಷವಾಗಿ ಚರ್ಚಿಸಿ, ಹಲವು ಹೊಸ ಫಲಿತಗಳನ್ನು ಕಂಡುಕೊಂಡಿದ್ದಾರೆ.

**೪. ನಿಡಗುರುಕಿ ಜೀವೂಬಾಯಿ ಅವರ ಕೀರ್ತನೆಗಳು : ಒಂದು ಅಧ್ಯಯನ**

ವಚನ ಸಾಹಿತ್ಯದ ಪ್ರಭಾವವನ್ನು ಪಡೆದುಕೊಂಡು ಹುಟ್ಟಿರುವ ಮತ್ತೊಂದು ಸಾಹಿತ್ಯ ರೂಪ ದಾಸಸಾಹಿತ್ಯ ಇಲ್ಲಿಯೂ ಕೂಡ ಪುರುಷರೇ ಹೆಚ್ಚಿನ ಪ್ರಮಾಣದಲ್ಲಿ ಕಿರ್ತನೆಗಳನ್ನು ರಚಿಸಿರುವುದು ಕಂಡುಬರುತ್ತದೆ. ಮಹಿಳಾ ಕೀರ್ತನಕಾರ್ತಿಯರು ಬೆರಳೆಣಿಕೆಯಲ್ಲಿ ದೊರೆಯುವರು. ಗಲಗಲಿಯ ಅವ್ವನವರು ದಾಸಸಾಹಿತ್ಯದಲ್ಲಿ ಕಂಡುಬರುವ ಮೊದಲ ಮಹಿಳಾ ಕೀರ್ತನಕಾರ್ತಿಯೆಂದು ಸಂಧೋಧಕರು ಗುರುತಿಸಿದ್ದಾರೆ. ಇದೇ ಸಾಲಿನಲ್ಲಿ ಬರುವ ಮಹಿಳಾ ಕೀರ್ತನಕಾರ್ತಿಯರೆಂದರೆ ಹರಪ್ಪನಹಳ್ಳಿ ಭೀಮವ್ವ, ಹೇಳವನಕಟ್ಟೆಯ ಗಿರಿಯಮ್ಮ ಮುಂತಾದವರನ್ನು ನೆನೆಯಬಹುದು. ನಂತರದಲ್ಲಿ ಕಾಣಿಸಿಕೊಳ್ಳುವ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ನಿಡುಗುರುಕಿಯ ಜೀವೂಬಾಯಿ. ಅವರು ಕೀರ್ತನೆ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವರು. ಒಟ್ಟಾರೆ ನಿಡುಗುರಕಿ ಜೀವೂಬಾಯಿಯವರ ಸಮಗ್ರ ಸಾಹಿತ್ಯ ಅಧ್ಯಯನವೇ ಇಲ್ಲಿದೆ. ಅದು ಒಂದು ರೀತಿಯಲ್ಲಿ ಮಹಿಳಾ ಕೀರ್ತನಕಾರ್ತಿಯರ ಅಧ್ಯಯನವೇ ಎನಿಸುವುದು. ಇಂಥ ಒಂದು ವಿಶೇಷ ಅಧ್ಯಯನವನ್ನು ಅತ್ಯಂತ ಶ್ರಮವಹಿಸಿ, ಶ್ರೀಶೈಲ ಮಠಪತಿಯವರು ಸಮರ್ಥವಾಗಿ ನಿರ್ವಹಿಸಿರುವರು.

**೫. ಸೊಬಗಿನ ಸೋನೆ : ಒಂದು ಅಧ್ಯಯನ**

ಕವಿ ದೇವರಾಜ ವಿರಚಿತ 'ಸೋಬಗಿನ ಸೋನೆ' ಕಾವ್ಯವು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ಸಾಂಗತ್ಯ ಕೃತಿ ಎಂಬುದು ಗಮನಾರ್ಹವಾದುದು. ದೇವರಾಜನನ್ನು ಸಾಂಗತ್ಯದ ಆದಿಕವಿಯೆಂದೂ, ಸೊಬಗಿನ ಸೋನೆಯನ್ನು ಸಾಂಗತ್ಯದ ಆದಿ ಕಾವ್ಯವೆಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಇತರ ಸಾಂಗತ್ಯ ಕೃತಿಗಳಾದ ಭರತೇಶ ವೈಭವ, ಕುಮಾರರಾಮನ ಸಾಂಗತ್ಯಗಳು, ರಾಮನಾಥ ಚರಿತೆ, ಹದಿಬದೆಯ ಧರ್ಮ, ಮೊದಲಾದ ಕಾವ್ಯಗಳನ್ನು ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ ಆದರೆ ಕನ್ನಡದ ಮೊದಲ ಸಾಂಗತ್ಯ ಕೃತಿಯಾದ ಸೊಬಗಿನ ಸೋನೆ ಕುರಿತು ಸಮಗ್ರ ಅಧ್ಯಯನವು ಇದುವರೆಗೂ ನಡೆದಿರುವುದಿಲ್ಲ. ಈ ಕೊರತೆಯನ್ನು ತುಂಬುವುದೇ ಈ ಮಹಾ ಪಬಂಧದ ಮುಖ್ಯ ಉದ್ದೇಶವಾಗಿದೆ. ಸಂಶೋಧಕರಾದ ಎಂ. ಪ್ರಭಾಕರ ಅವರು ಸೋನೆಯ ಕಾಲ, ಕತೃತ್ವ, ಪರಿಸರ, ವಸ್ತು, ಭಾಷೆ, ಛಂದಸ್ಸು, ಕಥನತಂತ್ರ ಮೊದಲಾದ ಅಂಶಗಳನ್ನು ಕುರಿತು ಅಮೂಲಾಗ್ರವಾಗಿ ಸಾಂಸ್ಕೃತಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ, ಚರ್ಚಿಸಿದ್ದಾರೆ. ಸೊಬಗಿನ ಸೋನೆ ಕಾವ್ಯದ ಕಥೆಯ ಆಶಯದ ದೃಷ್ಟಿಯಿಂದ ವರ್ಧಮಾನ ಚರಿತೆ, ವಿಕ್ರಮ ವಿಲಾಸ, ಮದನಮೋಹಿನಿ ಕಥೆ, ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ ಈ ಕೃತಿಗಳನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. ಕಾವ್ಯದಲ್ಲಿ ವ್ಯಕ್ತವಾಗಿರುವ ಮಹಿಳಾ ಸಂವೇದನೆಯನ್ನು ವಿಶೇಷವಾಗಿ ಗುರುತಿಸಿದ್ದಾರೆ.

**೬. ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳು : ಸಾಂಸ್ಕೃತಿಕ ಅನನ್ಯತೆ**

ಹಸ್ತಪ್ರತಿ ಉತ್ಪಾದನೆಯ ಪ್ರಾದೇಶಿಕ ನೆಲೆ, ವ್ಯಕ್ತಿಗತ ನೆಲೆ, ಭಾಷಿಕನೆಲೆ, ಹಾಗೂ ಪರಿಚಲನಾತ್ಮಕ ನೆಲೆ, ಪಠ್ಯ ಕೇಂದ್ರಿತ ನೆಲೆ ಹೀಗೆ ಬಹುಮುಖ ಆಯಾಮಗಳಿಂದ ಹಸ್ತಪ್ರತಿಗಳನ್ನು ಕುರಿತು ನಡೆಯುತ್ತಿರುವ ಅಧ್ಯಯನಗಳು ಔಚಿತ್ಯಪೂರ್ಣವಾಗಿವೆ. ಇಂತಹ ಅಧ್ಯಯನಗಳಿಂದ ಪಠ್ಯವೊಂದರ ಸೃಜನಶೀಲತೆಯ ಬಹುಬಗೆಯ ಅಧ್ಯಯನದ ಸಾಧ್ಯತೆಗಳು ಸಂಶೋಧನೆಗೆ ತೆರೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿ ಕಂಡುಬರುವ ಹಸ್ತಪ್ರತಿಗಳ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಕುರಿತು ಪ್ರಸ್ತುತ ಮಹಾಪ್ರಬಂಧವು ಅನೇಕ ಒಳನೋಟಗಳನ್ನು ನೀಡುತ್ತದೆ. ಸಂಶೋಧಕರಾದ ಬೋರೇಶಿ ಇ. ಅವರು ಚಿತ್ರದುರ್ಗ ಪರಿಸರದ ಹಸ್ತಪ್ರತಿಗಳನ್ನು ವ್ಯಕ್ತಿಗತ ನೆಲೆ ಹಾಗೂ ಸಾಂಸ್ಥಿಕ ನೆಲೆ ಎಂದು ಎರಡು ಸ್ಥೂಲ ವಿಭಾಗಗಳನ್ನಾಗಿ ವರ್ಗೀಕರಿಸಿಕೊಂಡಿದ್ದಾರೆ. ಅಲ್ಲಿನ ಹಸ್ತಪ್ರತಿಗಳ ಚಾರಿತ್ರಿಕ ಮಹತ್ವ, ಸಾಮಾಜಿಕ ಮಹತ್ವ, ಹಾಗೂ ಧಾರ್ಮಿಕ ಮಹತ್ವಗಳನ್ನು ಕುಲಂಕುಷವಾಗಿ ವಿಶ್ಲೇಷಿಸಿ ಚರ್ಚಿಸಿದ್ದಾರೆ.

**೧೭. ಎಂ.ಫಿಲ್ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|
| ೧. ಜಿ.ಎಮ್.ಶರಣಬಸವ | ಶಿವದಾಸ ಗೀತಾಂಜಲಿ : ಒಂದು ವಿವೇಚನೆ | ೨೦೦೬ |
| ೨. ಕೆಂಚಣ್ಣವರ | ರಾ.ಕು. : ಲಲಿತಪ್ರಬಂಧಗಳು | ೨೦೦೮ |
| ೩. ಚೋಬಾರಿ | ಆರ್.ಬಿ.ಚಿಲಮಿ : ಬದುಕು ಬರಹ | ೨೦೦೮ |
| ೪. ಎಂ.ಮುಧೋಬ ನಾಯಕ | ವಚನ ಸಾಹಿತ್ಯ ಮತ್ತು ಎಸ್.ಶಿವಣ್ಣ | ೨೦೦೯ |

೧. ಶಿವದಾಸ ಗೀತಾಂಜಲಿ : ಒಂದು ವಿವೇಚನೆ

ಕನ್ನಡ ಸಾಹಿತ್ಯದಲ್ಲಿ ಎಲ್.ಬಸವರಾಜು ಅವರದು ಬಹುದೊಡ್ಡ ಹೆಸರು ಮೈಸೂರು ವಿಶ್ವವಿದ್ಯಾಲಯದಲ್ಲಿ ವಚನ ಸಾಹಿತ್ಯ ಅಧ್ಯಯನ ಕೈಗೊಂಡವರಲ್ಲಿ ಅವರು ಮೊದಲಿಗರು ಶರಣರ ಹಾಡುಗಳನ್ನು ಮೊದಲ ಬಾರಿಗೆ ಅವರು ಸಂಪಾದಿಸಿದ್ದಾರೆ. ಗೇಯರೂಪದ ನೂರಾರು ಹಾಡುಗಳನ್ನು ಅವರು ಶಿವದಾಸ ಗೀತಾಂಜಲಿ ಎಂಬ ಹೆಸರಿನಿಂದ ಸಂಪಾದಿಸಿದ್ದಾರೆ. ನಿಜ ಹೇಳಬೇಕೆಂದರೆ, ಅಲ್ಲಿಯ ಪಾಠಾಂತರಗಳ ನೆರವಿನಿಂದ ಅವುಗಳನ್ನು ಪರಿಷ್ಕರಿಸಿದ್ದಾರೆ. ಶ್ರೀ ಶರಣಬಸವ ಅವರು ತುಂಬ ಶ್ರಮವಹಿಸಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

೨. ರಾ.ಕು. : ಲಲಿತ ಪ್ರಬಂಧಗಳು

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಲಲಿತ ಪ್ರಬಂಧವೂ ಒಂದು. ಬದುಕಿನ ನೋವು, ನಲಿವುಗಳನ್ನು ನಾವು ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ರಾಘವೇಂದ್ರ ಕುಲಕರ್ಣಿ ಅವರು ಹಲವಾರು ಲಲಿತ ಪ್ರಬಂಧಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕಾಣಿಕೆ ನೀಡಿದ್ದಾರೆ. ಅವರ ಲಲಿತ ಪ್ರಬಂಧಗಳಲ್ಲಿ ಸಾಮಾಜಿಕ ತಿಳಿಹಾಸ್ಯವಿದೆ. ಲಲಿತ ಪ್ರಬಂಧದ ಓಟವಿದೆ. ಶ್ರೀ ಕೆಂಚಣ್ಣವರ ಅವರು ಮೂಲ ಆಕರಗಳನ್ನು ಬಳಸಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

೩. ಆರ್.ಬಿ.ಚಿಲಮಿ : ಅವರ ಬದುಕು ಬರಹ

ಎಲೆಮರೆಯ ಕಾಯಂತೆ ದುಡಿಯುತ್ತಿರುವ ಚಿಲಮಿಯವರು ಉತ್ತಮ ಬರಹಗಾರರು, ಪ್ರಬಂಧ, ಜಾನಪದ, ಸಂಶೋಧನೆ, ವಚನ ಸಾಹಿತ್ಯ ಈ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದ್ದಾರೆ. ಶ್ರೀ ಚೋಬಾರಿ ಅವರು ಚಿಲಮಿ ಅವರ ಸಾಹಿತ್ಯವನ್ನು ತಲಸ್ಪರ್ಶೀಯವಾಗಿ ವ್ಯಾಸಂಗಮಾಡಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

೪. ವಚನ ಸಾಹಿತ್ಯ ಮತ್ತು ಎಸ್.ಶಿವಣ್ಣ

ಎಲೆಮರೆಯ ಕಾಯಂತೆ ದುಡಿದ ವಿದ್ವಾಂಸರಲ್ಲಿ ಶ್ರೀ ಎಸ್. ಶಿವಣ್ಣನವರು ಒಬ್ಬರು. ಹಸ್ತಪ್ರತಿ ಅಧ್ಯಯನಕ್ಕಂತೂ ಅವರು ಪ್ರಮಾಣ ಪುರುಷರು, ಹಸ್ತಪ್ರತಿ ಎಂದರೆ ಶಿವಣ್ಣ, ಶಿವಣ್ಣ ಎಂದರೆ ಹಸ್ತಪ್ರತಿ ಎಂಬ ಮಾತು ಜನಜನಿತವಾಗಿದೆ. ವಚನ ಸಾಹಿತ್ಯ ಸಂಪಾದನೆಯಲ್ಲಿ ಇವರದು. ಬಹು ದೊಡ್ಡ ಹೆಸರು. ಹಲವಾರು ಅಪ್ರಕಟಿತ ವಚನಕಾರರನ್ನು ಬೆಳಕಿಗೆ ತಂದವರು ಶಿವಣ್ಣನವರೇ, ಶ್ರೀ ಮುಧೋಬನಾಯಕ ಅವರು ವಚನ ಸಾಹಿತ್ಯಕ್ಕೆ ಶಿವಣ್ಣನ'ವರ ಕೊಡುಗೆಯನ್ನು ಅಚ್ಚುಕಟ್ಟಾಗಿ ಈ ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ.

೧೮. ರಾಷ್ಟ್ರೀಯ/ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು/ಸಮ್ಮೇಳನ/ಕಾರ್ಯಗಾರಗಳಲ್ಲಿ ಭಾಗವಹಿಸಿದ ವಿವರಗಳು:

| ಕ್ರಸಂ | ಸಮ್ಮೇಳನ ವಿಚಾರಸಂಕಿರಣದ/ಕಾರ್ಯಗಾರ ಶೀರ್ಷಿಕೆ | ಮಂಡಿಸಿದ ಪ್ರಬಂಧಗಳ ಶೀರ್ಷಿಕೆ | ದಿನಾಂಕ/ಸ್ಥಳ | ಸಂಘಟಿಸಿದ ವಿ.ವಿ/ಕಾಲೇಜು/ಸಂಸ್ಥೆ | |
|---|---|---|---|---|---|
| ೦೧ | ದಿನಮಾತು | ಜನ್ನನ ಯಶೋಧರ ಚರಿತೆ ಕುರಿತು : ಕೆಲವು ವಿಚಾರಗಳು | ೧೯೯೭ ವಿದ್ಯಾರಣ್ಯ | ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ | |
| ೦೨ | ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ –೧ | ಐತಿಹಾಸಿಕ ಪರಂಪರೆ ಉಳಿಸಿ | ೧೯೯೯ ಮರಿಯಮ್ಮನ ಹಳ್ಳಿ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಸರಕಾರಿ ಪದವಿಪೂರ್ವ ಕಾಲೇಜು ಮರಿಯಮ್ಮನಹಳ್ಳಿ |
| ೦೩ | ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ | ಐತಿಹಾಸಿಕ ಪರಂಪರೆ ಉಳಿಸಿ | ೨೦೦೪ ಸಿರಗುಪ್ಪಿ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಸರಕಾರಿ ಪ್ರೌಢಶಾಲೆ ಸಿರಗುಪ್ಪಿ (ತಾ॥ಜಿ॥ಬಾಗಲಕೋಟ) |
| ೦೪ | ಎರಡನೆಯ ಹಸ್ತಪ್ರತಿ ಸಮ್ಮೇಳನ | ಚಾರಿತ್ರಿಕ ಸಂಕಥನ | ೨೦೦೪ ಸಂಕೇಶ್ವರ. | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ಶಿವರುದ್ರೇಶ್ವರ ಕಲಾ ಮತ್ತು ಪಟ್ಟಣ ಪಂಚಾಯತ್ ಮಹಾವಿದ್ಯಾಲಯ, ಸಂಕೇಶ್ವರ. |
| ೦೫ | ರಾಷ್ಟ್ರೀಯ ಹಸ್ತಪ್ರತಿ ದಿನ | ಹಸ್ತಪ್ರತಿ ಸಂಗ್ರಹದ ಮಹತ್ವ | ೨೦೦೫ ತಾಳಿಕೋಟೆ | ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಹಸ್ತಪ್ರತಿ ಸಂಪನ್ಮೂಲ, ಸಂರಕ್ಷಣಾ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ಖಾಸ್ಗತೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ತಾಳಿಕೋಟೆ |

| | | | | | |
|---|---|---|---|---|---|
| ೦೬ | ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ–೫ | ಹಸ್ತಪ್ರತಿಗಳ ವಿಷಯ ವೈವಿಧ್ಯ | ೨೦೦೫ ಬೀದರ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಕರ್ನಾಟಕ ಸಾಹಿತ್ಯ ಸಂಘ, ಬೀದರ |
| ೦೭ | ರಾಷ್ಟ್ರೀಯ ಹಸ್ತಪ್ರತಿ ಸರ್ವೇಕ್ಷಣಾ ಅಭಿಯಾನ ಮತ್ತು ಕಾರ್ಯಗಾರ | ಹಸ್ತಪ್ರತಿ ಸಂಗ್ರಹ ಕ್ಷೇತ್ರಕಾರ್ಯ | ೨೦೦೫ ಹಾವೇರಿ | ರಾಷ್ಟ್ರೀಯ ಹಸ್ತಪ್ರತಿ ಸಂಪನ್ಮೂಲ, ಸಂರಕ್ಷಣಾ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ | ಜಿ.ಎಚ್.ಕಾಲೇಜು, ಹಾವೇರಿ |
| ೦೭ | ಮೂರನೆಯ ಹಸ್ತಪ್ರತಿ ಸಮ್ಮೇಳನ | ಬಿಜಾಪುರ ಜಿಲ್ಲೆಯ ಹಸ್ತಪ್ರತಿ ಸಂಪತ್ತು | ೨೦೦೫ ಬಿಜಾಪುರ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ |
| ೦೮ | ರಾಷ್ಟ್ರೀಯ ಹಸ್ತಪ್ರತಿ ದಿನಾಚರಣೆ ಮತ್ತು ಹಸ್ತಪ್ರತಿ ತರಬೇತಿ ಶಿಬಿರ | ಹಸ್ತಪ್ರತಿ ಸಂಗ್ರಹ ಕ್ಷೇತ್ರಕಾರ್ಯ | ೨೦೦೬ ಧಾರವಾಡ | ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಹಸ್ತಪ್ರತಿ ಸಂಪನ್ಮೂಲ, ಸಂರಕ್ಷಣಾ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ | ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ೦೯ | ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮ | ಜನಪ್ರಿಯ ಆವೃತಿಗಳು | ೨೦೦೬ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೧೦ | ನಾಲ್ಕನೆಯ ಹಸ್ತಪ್ರತಿ ಸಮ್ಮೇಳನ | ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ : ಬಿ.ಎಸ್.ಸಣ್ಣಯ್ಯ ಅವರ ಸಾಧನೆ | ೨೦೦೬ ತುಮಕೂರು | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ತುಮಕೂರು |
| ೧೧ | ಬೆಳಗಾವಿ ಜಿಲ್ಲೆಯ ವಿದ್ವತ್ಪರ'ಂಪರೆ | ಎಂ.ಬಿ. ನೇಗಿನಾಳ | ೨೦೦೬ ಬೆಳಗಾವಿ | ಲಿಂಗಾಯತ ಅಧ್ಯಯನ ಅಕಾಡೆಮಿ, ಬೆಳಗಾವಿ | ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ |
| ೧೨ | ವಾಲ್ಮೀಕಿ ಸಮುದಾಯದ ಬಿಕ್ಕಟ್ಟುಗಳು : ಪರಿಹಾರ | ಮರಿಯಮ್ಮನಹಳ್ಳಿ ವಾಲ್ಮೀಕಿ ಸಮುದಾಯ | ೨೦೦೭ ಮರಿಯಮ್ಮನ ಹಳ್ಳಿ | ವಾಲ್ಮೀಕಿ ಅಧ್ಯಯನ ಪೀಠ, ಕನ್ನಡ ವಿವಿ.ಹಂಪಿ | ವಾಲ್ಮೀಕಿ ಸಂಘ, ಮರಿಯಮ್ಮನಹಳ್ಳಿ |
| ೧೩ | ಹಸ್ತಪ್ರತಿ ದಾನಿಗಳ ಸುವರ್ಣ ಸಮಾವೇಶ | ಹಸ್ತಪ್ರತಿ ಸಂರಕ್ಷಣೆಯ ವಿಧಾನಗಳು | ೨೦೦೭ ವಿದ್ಯಾರಣ್ಯ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೧೪ | ರಾಷ್ಟ್ರೀಯ ಹಸ್ತಪ್ರತಿ ಜಾಗೃತಿ ಅಭಿಯಾನ | ಹಸ್ತಪ್ರತಿ ಸಂಗ್ರಹ ಮತ್ತು ಸಂರಕ್ಷಣೆ | ೨೦೦೭ ರಾಣೆಬೇನೂ ್ನರು | ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಹಸ್ತಪ್ರತಿ ಸಂಪನ್ಮೂಲ, ಸಂರಕ್ಷಣಾ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ | ಬಿ.ಜೆ.ಎಸ್.ಮಹಿಳಾ ಮಹಾವಿದ್ಯಾಲಯ, ರಾಣೆಬೇನ್ನೂರು |
| ೧೫ | ಹಸ್ತಪ್ರತಿ ದಾನಿಗಳ ಸುವರ್ಣ ಸಮಾವೇಶ | ಹಸ್ತಪ್ರತಿಗಳ ಸಂರಕ್ಷಣೆಯ ವಿಧಾನಗಳು | ೨೦೦೭ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೧೬ | ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ – ೯ | ಐತಿಹಾಸಿಕ ಪರಂಪರೆ ಉಳಿಸಿ | ೨೦೧೦ ಕಳ್ಳಂಬೆಳ್ಳ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಎಸ್.ಎಂ.ಆರ್.ಪದವಿಪೂರ್ವ ಕಾಲೇಜು, ಕಳ್ಳಂಬೆಳ್ಳ |
| ೧೭ | ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ – ೯ | ಹಸ್ತಪ್ರತಿಗಳ ವಿಷಯ ವೈವಿಧ್ಯ | ೨೦೧೦ ಚಿತ್ರದುರ್ಗ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ಜಗದ್ಗುರು ಮುರಘರಾಜೇಂದ್ರ ವಿದ್ಯಾ ಪೀಠ, ಚಿತ್ರದುರ್ಗ |
| ೧೮ | ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ – ೧೦ | ಹಸ್ತಪ್ರತಿ ಲಿಪಿಕಾರರು | ೨೦೧೦ ಕೂಡಲಸಂಗಮ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ |

| | | | | | |
|---|---|---|---|---|---|
| ೧೮ | ಹಳಗನ್ನಡ ಬೋಧನ ಮತ್ತು ತರಬೇತಿ ಶಿಬಿರ | ಕವಿರಾಜಮಾರ್ಗ : ನಾಡು ನುಡಿ ಚಿಂತನೆ | ೨೦೧೦ ಬಾಗಲಕೋಟ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ |
| ೧೯ | ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ – ೧೧ | ಐತಿಹಾಸಿಕ ಪರಂಪರೆ ಉಳಿಸಿ | ೨೦೧೧ ಬಬಲೇಶ್ವರ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ಶಾಂತವೀರ ಪದವಿಮಹಾ ವಿದ್ಯಾಲಯ, ಬಬಲೇಶ್ವರ |
| ೨೦ | ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ – ೧೧ | ಹಸ್ತಪ್ರತಿ ವಿಷಯ ಸಂಪತ್ತು | ೨೦೧೧ ಗುಳೇದಗುಡ್ಡ | ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ ಹಸ್ತಪ್ರತಿ ಸಂಪನ್ಮೂಲ, ಸಂರಕ್ಷಣಾ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ | ಪಿ.ಇ.ಟಿ. ಯ ಭಂಡಾರಿ ವರಾರಿ ಪದವಿ ಮಹಾ ವಿದ್ಯಾಲಯ, ಗುಳೇದಗುಡ್ಡ |
| ೨೧ | ಹಸ್ತಪ್ರತಿ ಮತ್ತು ಲಿಪಿಶಾಸ್ತ್ರ ಕಾರ್ಯಗಾರ | ಹಸ್ತಪ್ರತಿ ಲಿಪಿಕಾರರು | ೨೦೧೧ ವಿದ್ಯಾರಣ್ಯ | ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ | ನ್ಯಾಷನಲ್ ಮಿಷನ್ ಪಾರ್ ಮ್ಯಾನುಸ್ಕ್ರಿಪ್ಟ್ಸ್, ನವದೆಹಲಿ |
| ೨೨ | ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ–೧೦ | ಹಸ್ತಪ್ರತಿಗಳ ಲಿಪಿಕಾರರು | ೨೦೧೧ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೨೩ | ಹಾಲುಮತ ಸಮಾಜ ಸಂಸ್ಕೃತಿ | ಜಾನಪದ ವಿದ್ವಾಂಸ ನಿಂಗಣ್ಣ ಸಣ್ಣಕ್ಕಿ : ಸಾಹಿತ್ಯ ಸಾಧನೆ | ೨೦೧೧ ಕವಿಹಂ | ಹಾಲುಮತ ಅಧ್ಯಯನ ಪೀಠ, ಕವಿವಿ ಹಂಪಿ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೨೪ | ಏಳನೆಯ ಹಸ್ತಪ್ರತಿ ಸಮ್ಮೇಳನ | ಶಿ.ಚ.ನಂದಿಮಠ : ವಿಮರ್ಶೆ ನೆಲೆ | ೨೦೧೧ ಸುತ್ತೂರು | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು, (ಮೈಸೂರು) |
| ೨೫ | ಎಂಟನೆಯ ಹಸ್ತಪ್ರತಿ ಸಮ್ಮೇಳನ | ಭೈಷಜಶಾಸ್ತ್ರ | ೨೦೧೨ ಶಿವಮೊಗ್ಗ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಗುರುಬಸವ ಪೀಠ, ಬೆಕ್ಕಿನಕಲ್ಮಠ, ಶಿವಮೊಗ್ಗ |
| ೨೬ | ಬಸವೇಶ್ವರನ ವಚನಗಳು ಪ್ರಾಚೀನ ಮತ್ತು ಆಧುನಿಕ ಟೀಕೆಗಳು | ಡಾ.ಎಚ್. ತಿಪ್ಪೇರುದ್ರಸ್ವಾಮಿ ಅವರ ಟೀಕು | ೨೦೧೨ ನಂದಿಹಳ್ಳಿ | ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ |
| ೨೭ | ಲಕ್ಷ್ಮೀಶ ಕಾವ್ಯ ವೈಭವ | ಜೈಮಿನಿ ಭಾರತದ ಟೀಕುಗಳು | ೨೦೧೨ ಬೆಂಗಳೂರು | ಬಿ.ಎನ್.ಇ.ಎಸ್. ಕಾಲೇಜು, ಬೆಂಗಳೂರು | ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ ಕನ್ನಡ ಸಂಸ್ಕೃತಿ ಇಲಾಖೆ ಕರ್ನಾಟಕ ಸರ್ಕಾರ |
| ೨೮ | ಹಳೆಯ ಹೊನ್ನು | ಕೆಂಭಾವಿ ಭೋಗಣ್ಣನ ಸಾಂಗತ್ಯ | ೨೦೧೨ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೨೯ | ಒಂಭತ್ತನೆಯ ಹಸ್ತಪ್ರತಿ ಸಮ್ಮೇಳನ | ಓಲೆಮಠ ಮತ್ತು ಕೂಲಿಮಠ | ೨೦೧೩ ಕೆರೂರು | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಕ.ಜಾ. ಪರಿಷತ್ತು ಜಿಲ್ಲಾ ಘಟಕ, ಬಾಗಲಕೋಟೆ ಹಾಗೂ ಕೆರೂರು ಗ್ರಾಮಸ್ಥರು. |
| ೩೦ | ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ–೧೨ | ಹಸ್ತಪ್ರತಿ : ಪ್ರಾಚೀನ ಸಂರಕ್ಷಣೆ | ೨೦೧೩ ಶ್ರವಣಬೆಳಗೊಳ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ, ಶ್ರವಣಬೆಳಗೊಳ. |
| ೩೧ | ಹತ್ತನೆಯ ಹಸ್ತಪ್ರತಿ ಸಮ್ಮೇಳನ | ಪಥ್ಯ : ಪ್ರತೀಕರಣದ ದಾರ್ಶನಿಕ ನೆಲೆಗಳು | ೨೦೧೪ ಧಾರವಾಡ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಜೆ.ಎಸ್.ಎಸ್. ವಿದ್ಯಾಪೀಠ, ಧಾರವಾಡ. |
| ೩೨ | ಹನ್ನೊಂದನೆಯ ಹಸ್ತಪ್ರತಿ ಸಮ್ಮೇಳನ | ವಚನ ಸಾಹಿತ್ಯ : ಸಂಗೋಪನ ಕ್ರಿಯೆಗಳು | ೨೦೧೪ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ | ಕನ್ನಡ ವಿಶ್ವವಿದ್ಯಾಲಯ ಹಂಪಿ |
| ೩೩ | ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ–೧೩ | ಹಸ್ತಪ್ರತಿ ಸಂಗ್ರಹ ಕ್ಷೇತ್ರಕಾರ್ಯ | ೨೦೧೪ ಗುಲಬರ್ಗಾ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿ.ವಿ. ಗುಲಬರ್ಗಾ |
| ೩೪ | ಹಳೆಯ ಹೊನ್ನು | ಬಸವಕವಿಯ ಬಸವಕಲ್ಪದ್ರುಮಂ | ೨೦೧೪ ಕವಿಹಂ | ಹಸ್ತಪ್ರತಿಶಾಸ್ತ್ರ ವಿಭಾಗ | ಕನ್ನಡ ವಿಶ್ವವಿದ್ಯಾಲಯ ಹಂಪಿ |

| | | | | | |
|---|---|---|---|---|---|
| ೩೫ | ಹನ್ನೆರಡನೇ ಹಸ್ತಪ್ರತಿ ಸಮ್ಮೇಳನ | ದಕ್ಷಿಣ ಕನ್ನಡ ಜಿಲ್ಲೆಯ ಹಸ್ತಪ್ರತಿ ಸಂಪತ್ತು | ೨೦೧೫ ಉಜಿರೆ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ | ಶ್ರೀ ಮಂಜುನಾತೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ, ಡಾ.ಹಾ.ಮಾ.ನಾಯಕ ಸಂಶೋಧನ ಕೇಂದ್ರ, ಕನ್ನಡ ವಿಭಾಗ ಹಾಗೂ ಶ್ರೀ ಧರ್ಮಸ್ಥಳ ಮಂಜುನಾತೇಶ್ವರ ಪದವಿ ಕಾಲೇಜ, ಉಜಿರೆ |
| ೩೬ | ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ-೧೪ | ಹಸ್ತಪ್ರತಿ ಲಿಪಿಕಾರರು | ೨೦೧೬ ಉಡುಪಿ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ |
| ೩೭ | ಹಸ್ತಪ್ರತಿ ತರಬೇತಿ ಹಾಗೂ ಜಾಗೃತಿ ಶಿಬಿರ-೧೫ | ಹಸ್ತಪ್ರತಿ ಲಿಪಿಕಾರರು | ೨೦೧೬ ಇಲಕಲ್ಲ | ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ | ಶ್ರೀ ವಿಜಯ ಮಹಾಂತೇಶ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾ ವಿದ್ಯಾಲಯ, ಇಲಕಲ್ಲ |
| ೩೮ | ವಿಶೇಷ ಉಪನ್ಯಾಸ | ಕನ್ನಡ ಸಾಹಿತ್ಯ ಪರಂಪರೆ | ೨೦೧೬ ಕೂಡಲಸಂಗಮ | ಶ್ರೀ ಸಂಗಮೇಶ್ವರ ಪದವಿಪೂರ್ವ ಕಾಲೇಜು, ಕೂಡಲಸಂಗಮ | - |
| ೩೯ | ವಚನ ದಿನ | ವಚನ ಸಾಹಿತ್ಯ : ಸಮಾನತೆಯ ಆಶಯಗಳು | ೨೦೧೭ ಹುನಗುಂದ | ಶರಣ ಸಾಹಿತ್ಯ ಪರಿಷತ್ತು ತಾಲೂಕಾ ಘಟಕ, ಹುನಗುಂದ | ವ್ಹಿ.ಎಂ.ಎಸ್.ಆರ್. ವಸ್ತ್ರದ ಪದವಿ ಮಹಾ ವಿದ್ಯಾಲಯ ಹಾಗೂ ವಿ.ಎಸ್.ಬೇಳ್ಳಿಹಾಳ ಪದವಿಪೂರ್ವ ವಾಣಿಜ್ಯ ಮಹಾ ವಿದ್ಯಾಲಯ, ಹುನಗುಂದ |

**೧೯. ಪಡೆದ ಪ್ರಶಸ್ತಿ-ಮನ್ನಣೆ :**

ಪ್ರಕಟಗೊಂಡ ಕೃತಿಗಳಿಗೆ ಹಾಗೂ ಮಂಡಿಸಿದ ಪ್ರಬಂಧಗಳಿಗೆ, ಲೇಖನಗಳಿಗೆ ವಿದ್ವಾಂಸರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪೂರೈಸಿದ ವಿಭಾಗದ ಯೋಜನೆಗಳಿಗೆ ವಿಷಯ ತಜ್ಞರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು, ಸಂಘಸಂಸ್ಥೆಗಳು ಹಾಗೂ ಕಾಲೇಜುಗಳು ವಿಚಾರ ಸಂಕಿರಣ, ಕಾರ್ಯಗಾರ, ಕಮ್ಮಟಗಳಿಗೆ ಆಹ್ವಾನಿಸಿ ಸನ್ಮಾನಿಸಿವೆ.

**೨೦ ನಿರ್ವಹಿಸಿದ ಶೈಕ್ಷಣಿಕ ಮತ್ತು ಸಾಂಸ್ಥಿಕ ಜವಾಬ್ದಾರಿಗಳು :**

**೧. ಆಡಳಿತಾತ್ಮಕ ಜವಾಬ್ದಾರಿ :**

**೨. ಶೈಕ್ಷಣಿಕ ಜವಾಬ್ದಾರಿ :**

೧. ಮುಖ್ಯಸ್ಥರು, ಹಸ್ತಪ್ರತಿಶಾಸ್ತ್ರ ವಿಭಾಗ (೧೩-೧೦-೨೦೦೮ ರಿಂದ ೨೯-೧೦-೨೦೧೦)

೨. ಉಪನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ (೨೩-೧೧-೨೦೧೧ ರಿಂದ ೨೩-೦೨-೨೦೧೫)

೩. ಸಂಯೋಜನಾಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಘಟಕ : (೦೫-೦೨-೧೪ ರಿಂದ ೨೦೧೫)

೪. ಪ್ರಸಾರಾಂಗದ, ಅಂತರಿಕ ಸಲಹಾ ಸಮಿತಿ ಸದಸ್ಯರು (೨೪-೦೬-೨೦೧೧ ರಿಂದ ೨೫-೦೯-೨೦೧೧)

೫. ಅಧ್ಯಯನಾಂಗದ ಮಾನ್ಯತಾ ಸಂಸ್ಥೆಯಾದ ಗದಗದ ಲಿಂಗಾಯತ ಅಧ್ಯಯನದ ಸಂಸ್ಥೆಯ ಶೈಕ್ಷಣಿಕ ಸಲಹಾ ಸಮಿತಿ ಅಧ್ಯಕ್ಷರು (೧೬-೦೮-೨೦೧೪ ರಿಂದ ೧೫-೦೮-೨೦೧೬)

೬. ಮುಖ್ಯಸ್ಥರು ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ. (೧೧-೦೩-೨೦೧೫ ರಿಂದ ಪ್ರಸ್ತುತದ ವರೆಗೆ)

೭. ಎಂ.ಎ.,ಪಿಎಚ್.ಡಿ ಕೋರ್ಸ್ ಪಾಠಬೋಧನೆ ಹಾಗೂ ಪತ್ರಿಕೆ ಸಂಚಾಲಕತ್ವ, ಮೌಲ್ಯಮಾಪನ ಕಾರ್ಯನಿರ್ವಹಣೆ.

೮. ಎಂ.ಫಿಲ್, ವಿದ್ಯಾರ್ಥಿಗಳಿಗೆ ಪಾಠಬೋಧನೆ ಹಾಗೂ ಮೌಲ್ಯಮಾಪನ ಕಾರ್ಯನಿರ್ವಹಣೆ.

೯. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಎಂ.ಎ.ಕನ್ನಡ ಹಾಗೂ ಕನ್ನಡ ಸಾಹಿತ್ಯ ಡಿಪ್ಲೋಮಾ ಸಂಪರ್ಕ ತರಗತಿಗಳಿಗೆ ಪಾಠಬೋಧನೆ ಹಾಗೂ ಮೌಲ್ಯಮಾಪನ ಕಾರ್ಯನಿರ್ವಹಣೆ.

೧೦. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಮಾನ್ಯತಾ ಕೇಂದ್ರಗಳ ಪರಿಶೀಲನೆಯ ತಂಡದ ಸಂಚಾಲಕಾಗಿ ಕಾರ್ಯನಿರ್ವಹಿಸಲಾಗಿದೆ. (೨೦೧೫)

೧೧. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಎಂ.ಎ ಕನ್ನಡ ಸಾಹಿತ್ಯ ಪ್ರಶ್ನೆ ಪತ್ರಿಕೆ ಸಿದ್ಧತೆ ಹಾಗೂ ಮೌಲ್ಯಮಾಪನ.

**೧೨** ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ನಿರ್ದೇಶನಾಲಯದ ಪರೀಕ್ಷಾಧಿಕಾರಿಯಾಗಿ ಕಾರ್ಯನಿರ್ವಹಣೆ. (೨೦೦೯–೧೪)

೧೩. ಹಸ್ತಪ್ರತಿ ಅಧ್ಯಯನ ನಿಯತಕಾಲಿಕೆಯ ಸಹಾಯಕ ಸಂಪಾದಕ (೨೦೦೨ ೨೦೦೪)

೧೪. ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಸಂಸ್ಥೆಗಳ ಎಂ.ಫಿಲ್ ಮತ್ತು ಪಿಎಚ್.ಡಿ ಪರೀಕ್ಷೆ ಹಾಗೂ ಮಹಾಪ್ರಬಂಧಗಳ ಮೌಲ್ಯಮಾಪನ ಕಾರ್ಯನಿರ್ವಹಣೆ.

೧೫. ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗಕ್ಕೆ ಬಂದ ಹಸ್ತಪ್ರತಿಗಳ ಪರಿಶೀಲನೆ ಕಾರ್ಯನಿರ್ವಹಣೆ (೨೦೧೨)

೧೬. ಗುಲಬರ್ಗಾ ವಿಶ್ವವಿದ್ಯಾಲಯದ ಎಂ.ಎ ಕನ್ನಡ ವಿಭಾಗದ ಪ್ರಶ್ನೆ ಪತ್ರಿಕೆ ಸಿದ್ಧತೆ ಮತ್ತು ಮೌಲ್ಯಮಾಪನ (೨೦೦೯–೧೦)

೧೭. ಕನ್ನಡ ವಿಶ್ವವಿದ್ಯಾಲಯ ಚಿತ್ರಕಲಾ ನಿರ್ವಹಣಾ ಕೇಂದ್ರದ ಪರೀಕ್ಷಾಧಿಕಾರಿಯಾಗಿ ಕಾರ್ಯನಿರ್ವಹಣೆ. (೨೦೦೯–೧೧)

೧೮. ಕನ್ನಡ ವಿಶ್ವವಿದ್ಯಾಲಯ ಪಿಎಚ್.ಡಿ ಮಹಾಪ್ರಬಂಧಗಳ ಮೌಖಿಕ ಪರೀಕ್ಷೆಗಳ ಆತಂರಿಕ ಮೌಲ್ಯಮಾಪಕನಾಗಿ ಕಾರ್ಯನಿರ್ವಹಣೆ.

೧೯. ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎಂ.ಎ.ಕನ್ನಡ ಉತ್ತರ ಪತ್ರಿಕೆ, ಡಜರ್ಟೇಷನ್ ಮತ್ತು ಎಂ.ಫಿಲ್ ನಿಬಂಧಗಳ ಮೌಲ್ಯಮಾಪನ ಕಾರ್ಯನಿರ್ವಹಣೆ. (೨೦೧೪–೧೬)

*******

**ಡಾ.ಎಸ್.ಆರ್.ಚನ್ನವೀರಪ್ಪ,**
**ಪ್ರಾಧ್ಯಾಪಕರು,**
**ಹಸ್ತಪ್ರತಿಶಾಸ್ತ್ರ ವಿಭಾಗ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ – ೫೮೩೨೭೬.**